


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

Volume : 06 Issue : 269 Thursday 04-07-2024 E-mail : maruti.b.hosamani76@gmail.com Page: 4 Price : Rs. 1/-


## ಕ್ಷೇತ್ರದ ಕಟ್ಟ ಕಡೇ ವ್ಯಕ್ತಿಯ ಹೆಸರಿಡಿದು ಕರೆಯುವ ಹೃದಯ ಶ್ರೀಮಂತಿಕೆ – ಲಿಂ, ಎಸ್.ಆರ್.ಕಾಶಪ್ಪನರ ಅಪರೂಪದ ರಾಜಕಾರಣಿ

**ಹುನಗುಂದ :** ಕ್ಷೇತ್ರದ ಕಟ್ಟ ಕಟ್ಟಕಡೆ–ಯ ವ್ಯಕ್ತಿಯನ್ನು ಅತ್ಯಂತ ಪ್ರೀತಿಯಿಂದ ಹೆಸರಿಡಿದು ಕರೆಯುವ, ಮಾತನಾಡಿಸುವ ಅಪರೂಪದ ವಿಶಾಲ ಹೃದಯದ ರಾಜ–ಕಾರಣಿಯೇ ಲಿಂ.ಎಸ್.ಆರ್. ಕಾಶಪ್ಪನವರ ಆಗಿದ್ದರುಎಂದುಉಜ್ಜಯನಿಮಹಾಪೀಠದ ಸದ್ದರ್ಮ ಸಿಂಹಾಸನಾಧೀಶ್ವರ 1008 ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದಕರು ಹೇಳಿದರು.

ಬುಧವಾರತಾಲೂಕಿನಹಾವರಗಿಗ್ರಾಮದಲ್ಲಿ ಎಸ್.ಆರ್.ಕೆ.ಸ್ಮಾರಕ ಪ್ರತಿಷ್ಠಾನ ಇಳಕಲ್ಲದ ವತಿಯಿಂದಜನಾನುರಾಗಿ,ಮುತ್ಸದ್ದಿನಾಯಕ, ಮಾಜಿ ಸಚಿವ ಲಿಂ,ಎಸ್.ಆರ್.ಕಾಶಪ್ಪನವರ ಅವರ22ನೆಯಪುಣ್ಯಸ್ಮರಣೆಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿಕೊಂಡು ಮಾತನಾಡಿದ ಅವರು, ಅಧಿಕಾರಿ,ಸಂಪತ್ತು ಹಾಗೂಸ್ಥಾನದಬಲದಿಂದವ್ಯಕ್ತಿದೊಡ್ಡವನು ಅನಿಸಿಕೊಳ್ಳುವುದಿಲ್ಲ. ವ್ಯಕ್ತಿಯೊಬ್ಬ ತನ್ನ ಜೀವನದಲ್ಲಿ ಮಾಡಿದ ಧಾರ್ಮಿಕ, ಶೈಕ್ಷಣಿಕ, ಸಮಾಜಮುಖಿ ಕಾರ್ಯಗಳು ವ್ಯಕ್ತಿಯ ಶರೀರ ಅಳಿದ ಮೇಲು ಅವರ ಹೆಸರು ಶಾಶ್ವತವಾಗಿರುತ್ತೇ ಎನ್ನುವುದ್ದಕ್ಕೆ ಲಿಂ.ಎಸ್. ಆರ್.ಕಾಶಪ್ಪನವರ ಜನಪರ ಕಾರ್ಯಗಳೇ ಸಾಕ್ಷಿಯಾಗಿವೆ. ಶಿಕ್ಷಣ, ಆರೋಗ್ಯ, ಕೃಷಿ ಸಂಬಂಧಿಸಿದ ನೀರಾವರಿ, ಕುಡಿಯುವ ನೀರುಸೇರಿದಂತೆಅಗತ್ಯತೆಗಳನ್ನುಸಮಾಜದ ಕಟ್ಟಕಡೆವ್ಯಕ್ತಿಗೂಮುಟ್ಟಿಸುವಮಹಾದಾಸೆಯ ಲಿಂ, ಎಸ್. ಆರ್. ಕಾಶಪ್ಪನವರಲ್ಲಿ ಇತ್ತು. ಅವರ ಹಾದಿಯಲ್ಲಿಯೇ ಅವರ ಸುಪುತ್ರ ಶಾಸಕ ವಿಜಯಾನಂದ ಕಾಶಪ್ಪನವರ ಸಹ ಕ್ಷೇತ್ರದ ಅಭಿವೃದ್ದಿಪರ ಕಾರ್ಯಗಳನ್ನು ಮಾಡುತ್ತಿದ್ದಾರೆ ಎಂದರು.



ಕಾಶೀಮಹಾಪೀಠದನೂತನಪೀಠಾಧೀಶ್ವರ ಡಾ.ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರು ದಿವ್ಯ ಸಾನಿಧ್ಯ ವಹಿಸಿಕೊಂಡು ಮಾತನಾಡಿ ಲಿಂ,ಎಸ್. ಆರ್,ಕಾಶಪ್ಪನವರುಅವರಜೀವಿತಾವಧಿಯಲ್ಲಿ ಮಾಡಿದ ಕಾರ್ಯಗಳು ಮತ್ತು ಅವರ ಧರ್ಮನಿಷ್ಠೆಕಾಯಕಗಳು ಇಂದಿಗೂ ಕ್ಷೇತ್ರದ ನೆನಪಿಸಿಕೊಳ್ಳುವಂತಾಗಿದೆ. ತಂದೆಯ ಸಂಕಲ್ಪವನ್ನು ಈಡೇರಿಸುವ ಕಾರ್ಯವನ್ನು ನಾನು ಮಾಡುತ್ತಿದ್ದೇನೆಂದು ವೇದಿಕೆಯ ಮೇಲೆಹೇಳುತ್ತಿರುವ ಶಾಸಕ ವಿಜಯಾನಂದ ಕಾಶಪ್ಪನವರ ಮುನ್ನಡೆಯುತ್ತಿರುವುದು ತಂದೆಯ ಸಂಸ್ಕಾರ ಅವರಲ್ಲಿದೆ ಎನ್ನುವುದು ಗೊತ್ತಾಗುತ್ತದೆ ಎಂದರು

ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿ ಪಂಚಪೀಠಾಧೀಶ್ವರಮತ್ತುನಾಡಿನಹರಗುರು ಚರಮೂರ್ತಿಗಳ ಆಶೀರ್ವಾದದಿಂದ ನಡೆ–ಯುತ್ತದೆ ಕಾಶಪ್ಪನವರ ಕುಟುಂಬ. ನಮ್ಮ ತಂದೆಯವರ ಶಿಕ್ಷಣ ಕ್ರಾಂತಿ ಮತ್ತು ಹಸಿರು ಕ್ರಾಂತಿಯ ಕನಸ್ಸುನ್ನು ನನಸ್ಸು ಮಾಡಲು ರಾಮಥಾಳ ಮರೋಳ ಏತ ನೀರಾವರಿಯ ಮೂಲಕ16ಸಾವಿರಹೆಕ್ಟರ್‌ಪ್ರದೇಶಕ್ಕೆಕಾಲುವೆ ನೀರಾವರಿ ಮತ್ತು ಏಷ್ಯಾದಲ್ಲಿ ಮೊದಲು ಇಸ್ರೇಲ್ ಮಾದರಿಯಲ್ಲಿ 60 ಸಾವಿರ ಎಕರೆ ಪ್ರದೇಶಕ್ಕೆ ಹನಿ ನೀರಾವರಿ ಯೋಜನೆಯನ್ನು ತಂದು ಅನುಷ್ಠಾನಗೊಳಿಸಿ ರೈತರ ಬಾಳಿನಲ್ಲಿ ಹಸಿರು ಕ್ರಾಂತಿಯನ್ನು ಮಾಡಲಾಗಿದೆ. ನ್ಮಮ ತಂದೆಯವರುಬಿಟ್ಟುಹೋದಕಾರ್ಯಗಳನ್ನು ಸಂಪೂರ್ಣ ಈಡೇರಿಸುವ ಅವರ ಆತ್ಮ–ಕ್ಕೆ ಶಾಂತಿ ಸಿಗುವಂತೆ ಮಾಡುತ್ತೇನೆ, ಹಿಂದೆ ನಮ್ಮ ತಂದೆಯವರು ಅನೇಕ ವಿವಾದಗಳ ಮಧ್ಯದಲ್ಲಿ ಕೂಡಲ ಸಂಗಮದಲ್ಲಿ ಪಂಚಪೀಠಾಧೀಶ್ವರ ಅಡ್ಡಪಲ್ಲಕ್ಕಿ ಉತ್ಸವ, ಧರ್ಮಸಭೆಯನ್ನು ನಡೆಸಿದಂತೆ ಮುಂದಿನ ದಿನಗಳಲ್ಲಿ ಹುನಗುಂದ ಮತ ಕ್ಷೇತ್ರದಲ್ಲಿ ಮತ್ತೊಂದು ಬಾರಿ ಪಂಚಪೀಠಾಧೀಶ್ವರ ಕ–ರೆದು ಅಡ್ಡಪಲ್ಲಕ್ಕಿ ಉತ್ಸವ ನಡೆಸುವ ಮೂಲಕ ಧರ್ಮಸಭೆ ನಡೆಸಲಾಗುವುದು. ಅದರ ಜೊತೆಗೆ ಎಸ್.ಆರ್,ಕೆ ಸ್ಮಾರಕ ಪ್ರತಿಷ್ಠಾನ ವತಿಯಿಂದ ಅನೇಕ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ, ಉಚಿತ ಆರೋಗ್ಯ ಶಿಬಿರ, ಉದ್ಯೋಗಗಳನ್ನು ಮಾಡುತ್ತಾ ಬಂದಿದೆ. ಅದರಂತೆ ಮುಂದಿನ ದಿನಗಳಲ್ಲಿ ಸಕ್ಕರೆ ಕಾರ್ಖಾನೆಯನ್ನು ಆರಂಭಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ನಂದವಾಡಗಿ ಅಳಂದ ಚನ್ನಬಸವ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು, ಬಿಲ್ಕೆರೂರ ಅಡವಿಹಾಳದ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಗಳು, ಗಿರಿಸಾಗರದ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗಂಗಾಧರದೊಡಮನಿ,ವಕೀಲಸಿ.ವಿ.ಕೋಟಿ ಮಾತನಾಡಿದರು.

ದಿಂಡವಾರ ಕುಮಾರಲಿಂಗ ಶಿವಾಚಾರ್ಯ ಸ್ವಾಮಿಗಳು, ಹಡಗಲಿ ನಿಡಗುಂದಿಯ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಮುತ್ತತ್ತಿ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳುಕೂಡಲಸಂಗಮಸಾರಂಗಮಠದ ಅಭಿನವ ಜಾತವೇದ ಶಿವಾಚಾರ್ಯ ಸ್ವಾಮಿಗಳು, ಚಳಗೇರಿಯ ವಿರುಪಾಕ್ಷಲಿಂಗ ಶಿವಾಚಾರ್ಯ ಸ್ವಾಮಿಗಳು,ತಂಗಡಗಿಯ ಬಸವಪ್ರಿಯ ಅನ್ನದಾನಿ ಭಾರತಿ ಸ್ವಾಮಿಗಳು, ಕೋಲಾರವಿಜಯಪುರದಯೋಗಿಕಲ್ಲಿನಾಥ ದೇವರು ಸಾನಿಧ್ಯ ವಹಿಸಿಕೊಂಡಿದ್ದರು. ನಗರಸಭೆ ಮಾಜಿ ಅಧ್ಯಕ್ಷ ದೇವಾನಂದ ಕಾಶಪ್ಪನವರ,ರಜಾಕ್‌ತಟಗಾರ,ಶಿವಾನಂದ ಕಂಠಿ, ಸಂಗಣ್ಣ ಗಂಜೀಹಾಳ, ಮಲ್ಲಣ್ಣ ಎಲೇಗಾರ, ಮಹಾಲಿಂಗಪ್ಪ ಕಾಶಪ್ಪನವರ, ಬಸವರಾಜ ಶಿರೂರ, ರುದ್ರಪ್ಪ ಕಾಶಪ್ಪನವರ, ಮಹಾಂತೇಶ ಕಾಶಪ್ಪನವರ ಸೇರಿದಂತೆ ಅನೇಕರು ಇದ್ದರು.ಜಿ.ಪಂ ಮಾಜಿ ಅಧ್ಯ–ಕ್ಷೆ ವೀಣಾ ಕಾಶಪ್ಪನವರ ಸ್ವಾಗತಿಸಿ ಪ್ರಸ್ತಾವಿಕವಾಗಿ ಮಾತನಾಡಿದರು, ಸಂಗಣ್ಣ ಗದ್ದಿ ನಿರೂಪಿಸಿದರು, ಎಸ್.ಕೆ.ಕೊನೆಸಾಗರ ವಂದಿಸಿದರು.

**ತಾಲೂಕ ವರದಿಗಾರರು ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್:ಮಲ್ಲಿಕಾರ್ಜುನ ಎಂ.ಬಂಡರಗಲ್ಲ.ಹುನಗುಂದ.**

## ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರ ಹೊಣೆಗಾರಿಕೆ ಅಗತ್ಯವಾಗಿದೆ: ಶಾಸಕ ಡಾ. ಎನ್.ಟಿ. ಶ್ರೀನಿವಾಸ್



**ಎಂ.ಬಿ.ಅಯ್ಯನಹಳ್ಳಿ :** ಕೂಡ್ಲಿಗಿ ತಾಲೂಕಿನ ಎಂ.ಬಿ. ಅಯ್ಯನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ವನ ಮಹೋತ್ಸವ ಕಾರ್ಯಕ್ರದಲ್ಲಿ ಗಿಡ ನೆಟ್ಟು ಮಾತನಾಡಿ ಗಿಡ ಮರಗಳು ಇಂಗಾಲವನ್ನು ಸೇವಿಸಿ, ತಮಗೆ ಸ್ವಚ್ಛ ಆಮ್ಲಜನಕವನ್ನು ನೀಡುವ ಗಿಡ, ಮರ ಬೆಳೆಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಹಸಿರು ಇದ್ದರೆ ಉಸಿರು, ಕಾಡು ಇದ್ದರೆ ನಾಡು ಎನ್ನುವಂತೆ. ನನ್ನ ಗಿಡ, ನನ್ನ ಹೆಮ್ಮೆ ವೃಕ್ಷಾಂದೋಲನದಲ್ಲಿ ಭಾಗವಹಿಸಿರುವುದು ಸಂತೋಷವಾಗಿದೆ. ಇಂದು ನಾನು ನೆಟ್ಟ ಈ ಸಸಿ ಬೆಳೆದು ದೊಡ್ಡ ಮರವಾಗಿ ನೋಡಲು ಇಚ್ಛಿಸುತ್ತೇನೆ. ನಮ್ಮ ಕರ್ನಾಟಕ ಸರ್ಕಾರ ಹಸಿರುದಿಕೆಯನ್ನು ಶೇ 33 ಕ್ಕೆ ಹೆಚ್ಚಿಸಲು ರಾಜ್ಯ ಸರ್ಕಾರ ಮಾಡಿರುವ ಸಂಕಲ್ಪಕ್ಕೆ ಅನುಗುಣವಾಗಿ ವನ ಮಹೋತ್ಸವ ಆಂದೋಲನವನ್ನು ಆಯೋಜಿಸಲಾಗಿದೆ ಎಂದರು. ಇದೇ ವೇಳೆ ಶಾಸಕರು ಮಕ್ಕಳಿಗೆ ಸಿಹಿ ಹಂಚಿ ಆರೋಗ್ಯ ವಿಚಾರಿಸಿ ಕಾಳಜಿ ವಹಿಸಲು ಸೂಚಿಸಿದರು. ಊರಿನ ಗ್ರಾಮಸ್ಥರು ಶೈಕ್ಷಣಿಕ ಗುಣಮಟ್ಟ ಕಳಪೆಯಾಗಿರುವ ಕುರಿತು ಕಳವಳ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳು ಶಾಲಾ ಪರಿಸರವನ್ನು ಕಟ್ಟು ನಿಟ್ಟಾಗಿ ಸಂರಕ್ಷಿಸಲು ಕ್ರಮ ಕೈಗೊಳ್ಳಲು ಶಾಸಕರಿಗೆ ಮೌಖಿಕವಾಗಿ ಮನವಿ ಮಾಡಿ ಕೊಂಡರು. ಗ್ರಾಮಸ್ಥರು ಮತ್ತು ವಿದ್ಯಾರ್ಥಿಗಳ ಅಹವಾಲು ಆಲಿಸಿದ ಶಾಸಕರು ಕೂಡಲೇ ಸಭೆ ಮಾಡಿ ಶೈಕ್ಷಣಿಕ ಗುಣಮಟ್ಟಕ್ಕೆ ಒತ್ತು ಕೊಡಲು ಶಾಲಾ ಆಡಳಿತ ಮಂಡಳಿಗೆ ಸೂಚಿಸಿದರು. ಹಾಗೆಯೇ ಸರ್ಕಾರಿ ಪರಿಶಿಷ್ಟ ವರ್ಗಗಳ ಮೆಟ್ರಿಕ್ ಪೂರ್ವ ಬಾಲಕರ ನಿಲಯಕ್ಕೆ ಶಾಸಕರು ಭೇಟಿ ನೀಡಿ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಅಜ್ಜನಗೌಡ್ರು, ಪಿ ನಾಗಣ್ಣ, ಡಿ ರಾಮಣ್ಣ, ಗ್ರಾ.ಪಂ ಅಧ್ಯಕ್ಷೆ ಒಬಕ್ಕ ಪಾಪಣ್ಣ, ಉಪಾಧ್ಯಕ್ಷ ಆರ್ ವೀರಣ್ಣ, ಕೂಡ್ಲಿಗಿ ವಲಯ ಅರಣ್ಯಾಧಿಕಾರಿ ಸಂದೀಪ್ ನಾಯಕ, ಗ್ರಾ.ಪಂ ಸದಸ್ಯರಾದ ರೇಣುಕಾಚಾರ್ಯ, ಚೆನ್ನಪ್ಪ, ಶಿವಕುಮಾರ್, ಗುರುಸ್ವಾಮಿ, ಸುಮ ಶಿವಕುಮಾರ್, ಪ್ರಶಾಂತ್ ಗೌಡ್ರ್, , ಯುಎಸ್ ಎನ್ ಎಲ್ ಮಲ್ಲಿಕಾರ್ಜುನ್, ಅರುಣ್ ಕುಮಾರ್ ಹೊಸಮನೆ , ಚಿದಾನಂದಪ್ಪ, ಅಲ್ಲಾಭಕ್ಷ್, ಕೊಟ್ರೇಶ್ ಹಾರಕಬಾವಿ, ಕಾರ್ತಿಕ್ ಸೇರಿದ ಅರಣ್ಯ ಇಲಾಖೆ ಸಿಬ್ಬಂದಿಗಳು, ಶಿಕ್ಷಕರು, ನಿಲಯ ಪಾಲಕರು, ವಿದ್ಯಾರ್ಥಿಗಳು, ಮುಖಂಡರು, ಸಾರ್ವಜನಿಕರು ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್.ವೀರೇಶ್.ಕಾನಾ ಹೊಸಹಳ್ಳಿ.**

## ಇಂದು ರಾಂಪುರ ಎಲ್ಲಮ್ಮನ ಎಸ್ಟೇಟಿನಲ್ಲಿ ಶಾಸಕರ ಎನ್ ವೈ ಗೋಪಾಲಕೃಷ್ಣ ಹುಟ್ಟುಹಬ್ಬ ಆಚರಣೆ



**ರಾಂಪುರ :** ಮೊಳಕಾಲ್ಮೂರು ಕ್ಷೇತ್ರದ ಜನಪ್ರಿಯ ಶಾಸಕರಾದ ಸನ್ಮಾನ್ಯ ಶ್ರೀ ಎನ್ ವೈ ಗೋಪಾಲಕೃಷ್ಣ ರವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು ಶುಭ ಕೋರುವವರು ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು ರಾಂಪುರ ಗ್ರಾಮ ಪಂಚಾಯಿತಿ ಶ್ರೀ ಎನ್ ವೈ ಗೋಪಾಲಕೃಷ್ಣ ಮಾನ್ಯ ಜನಪ್ರಿಯ ಶಾಸಕರು ಮೊಳಕಾಲ್ಮೂರು ವಿಧಾನ ಸಭಾ ಕ್ಷೇತ್ರ ಹಾಗೂ ಎನ್ ವೈ ಎಚ್ ಕುಟುಂಬದವರು ತಾಯಿ ಯಲ್ಲಮ್ಮ ತಂದೆ ಯಲ್ಲಪ್ಪ ಇವರ ಗದ್ದಿಗೆಯ ಸ್ಥಳೀಯ ಎಲ್ಲಮ್ಮನ ಎಸ್ಟೇಟ್ ನಲ್ಲಿ ಮೊಳಕಾಲ್ಮೂರು ವಿಧಾನ ಸಭಾ ಕ್ಷೇತ್ರದ ಎಲ್ಲಾ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಹಾಗೂ ಅಧಿಕಾರಿಗಳು ಚಿತ್ರದುರ್ಗ ಬಳ್ಳಾರಿ ವಿಜಯನಗರ ಮೂಲೆ ಮೂಲೆಗಳಿಂದ ಬಂದಿರತಕ್ಕಂತ ಅಧಿಕಾರಿ ಸಿಬ್ಬಂದಿ ವರ್ಗದವರು ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸ್ಥಳೀಯ ರಾಂಪುರ ಎಲ್ಲಮ್ಮನ ಎಸ್ಟೇಟ್ ನಲ್ಲಿ ಹುಟ್ಟು ಹಬ್ಬವನ್ನು ಆಚರಿಸಿದರು ಇದಾದ ನಂತರ ಎಲ್ಲಾ ಸರ್ವ ಸದಸ್ಯರಿಗೆ ಭೋಜನ ವ್ಯವಸ್ಥೆ ಕಲ್ಪಿಸಲಾಗಿತ್ತು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ತಿಪ್ಪೇಸ್ವಾಮಿ ಹೊಂಬಾಳೆ ಮೊಳಕಾಲ್ಮುರು.**

## ಇನ್ನರ್ ವೀಲ್ ಕ್ಲಬ್‌ಗೆ ನೂತನ ಪದಾಧಿಕಾರಿಗಳ ಆಯ್ಕೆ



**ಕೊಪ್ಪಳ :** ಪ್ರಸ್ತುತ 2024–25ನೇ ಸಾಲಿಗಾಗಿ ಕೊಪ್ಪಳ ಇನ್ನರ್ವಿಲ್ ಕ್ಲಬ್ ಗೆ ನೂತನ ಪದಾಧಿಕಾರಿಗಳ ಅವಿರೋಧಆಯ್ಕೆ ಮಾಡಲಾಯಿತು ನೂತನಅಧ್ಯಕ್ಷರಾಗಿ ಉಮಾ ಮಹೇಶ್ ತಂಬ್ರಳ್ಳಿ ಆಯ್ಕೆಗೊಂಡಿದ್ದಾರೆ

ಅದೇ ರೀತಿ ಕೊಪ್ಪಳ ಇನ್ನರ್ವಿಲ್ ಕ್ಲಬ್ ಗೆ ಉಪಾಧ್ಯಕ್ಷರಾಗಿ ಮಧು ಶೆಟ್ಟರ್ ಕಾರ್ಯದರ್ಶಿಯಾಗಿ ಮೀನಾಕ್ಷಿ ಬಣ್ಣದ ಬಾವಿ ಖಜಾಂಚಿಯಾಗಿ ಆಶಾ ಗೌಡರು ಆಯ್ಕೆಗೊಂಡಿದರೆ ಐ ಎಸ್ ಓ ಆಗಿ ಮಧು ನಿಲೋಗಲ್ ಎಡಿಟರ್ ಆಗಿ ನಾಗವೇಣಿ ಗರೂರು ಆಯ್ಕೆಗೊಂಡಿದ್ದಾರೆ. ಒಂದು ವರ್ಷದ ಅವಧಿಗಾಗಿ ಕೊಪ್ಪಳ ಇನ್ನರ್ವಿಲ್ ಕ್ಲಬ್ ಗೆ ನೂತನ ಪದಾಧಿಕಾರಿಗಳ ಆಯ್ಕೆಗೊಂಡಿದ್ದು ಒಂದು ವರ್ಷದ ಅವಧಿ ಒಳಗಾಗಿ ಎಲ್ಲಾ ಪದಾಧಿಕಾರಿಗಳು ಹಿರಿಯರ ಮಾರ್ಗದರ್ಶನದಲ್ಲಿ ಸಾಮಾಜಿಕ ಸೇವೆಯನ್ನು ಮಾಡಲಿದ್ದಾರೆ. ಜುಲೈ 3ರ ಬೆಳಿಗ್ಗೆ 9:30 ಗಂಟೆಗೆ ಶೋಭಾ ರೆಸ್ಟೋರೆಂಟ ಹೋಟೆಲ್ ಸಭಾಂಗಣದಲ್ಲಿ ನೂತನ ಪದಾಧಿಕಾರಿಗಳ ಪದ ಗ್ರಹಣ ಸಮಾರಂಭ ಜರುಗಲಿದೆ ಎಂದು ನೂತನ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ತಿಳಿಸಿದ್ದಾರೆ.

## ವಿಕಲಚೇತನರೊಂದಿಗೆ ಹುಟ್ಟು ಹಬ್ಬ ಸಂತಸ ತಂದಿದೆ: ಕಾಶಪ್ಪನವರು




**ಇಳಕಲ್ :** ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಶಾಸಕ ವಿಜಯಾನಂದ ಕಾಶಪ್ಪನವರ ಅವರನ್ನು ಇಲ್ಲಿನ ಮಹಾಂತೇಶ ಮಲ್ಟಿ ಸ್ಪೇಶಾಲಿಟಿ ಆಸ್ಪತ್ರೆಯಲ್ಲಿ ವಿ.ಸಿ.ಅಕ್ಕಿ ಸ್ಮಾರಕ ಸಂಘದ ವತಿಯಿಂದ ಸತ್ಕರಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು ನಿಗಮದ ವತಿಯಿಂದ ಸಿಗಬಹುದಾದ ಎಲ್ಲಾ ಸೌಲಭ್ಯಗಲಳನ್ನು ಈ ಭಾಗದ ಜನರಿಗೆ ಒದಗಿಸಿ ಕೊಡುವದಾಗಿ ಹೇಳಿದರು. ಕಾರ್ಯಕ್ರಮದಲ್ಲಿ ಮಾಜಿ ಶಾಸಕಿ ಗೌರಮ್ಮ ಕಾಶಪ್ಪನವರ, ರಾಜು ವಿಜಯ ಗದ್ದನಕೇರಿ, ಮಹಾಂತಗೌಡ ಪಾಟೀಲ ಜಿಎಂಇ ಮುರಳಿ ದೇಶಪಾಂಡೆ ಪಾಲ್ಗೊಂಡಿದ್ದಾರೆ.

ಸಾನಧ್ಯವನ್ನು ವಹಿಸಿದ್ದ ಗುರುಮಹಾಂತಶ್ರೀಗಳು ಮಾತನಾಡಿ ಶಾಸಕರ ಜನ್ಮದಿನದಂದು ನಡೆದ ಈ ಸಮಾರಂಭ ಅತ್ಯಂತ ಔಚಿತ್ಯಪೂರ್ಣ ಎಂದು ಹೇಳಿದರು. ಅಧ್ಯಕ್ಷತೆಯನ್ನು ಡಾ ಕೆ.ವಿ ಅಕ್ಕಿ ವಹಿಸಿದ್ದರು. ಡಾ ಮಹಾಂತೇಶ ಅಕ್ಕಿ ಸ್ವಾಗತಿಸಿದರು ಡಾ ಅರುಣಾ ಅಕ್ಕಿ ಪ್ರಾಸ್ತಾವಿಕವಾಗಿ ಮಾತನಾಡಿದರು ಅವಿನಾಶ ಅಕ್ಕಿ ವಂದಿಸಿದರು. ಸುಶ್ಮಿತಾ ಬಾರಿಗಿಡದ ನಿರೂಪಿಸಿದರು.

ಇದೇ ಸಮಯದಲ್ಲಿ ಪತ್ರಿಕಾ ದಿನಾಚರಣೆ ಅಂಗವಾಗಿ ಪತ್ರಕರ್ತರನ್ನು ವೈದ್ಯ ದಿನಾಚರಣೆ ಅಂಗವಾಗಿ ವೈದ್ಯರನ್ನು ಮತ್ತು ಚಾಟೆಂಡ್ ಅಕೌಂಟೆಂಟ ಅವರನ್ನು ಸಂಘದ ವತಿಯಿಂದ ಸತ್ಕರಿಸಲಾಯಿತು.

## ಆಡಳಿತಾಧಿಕಾರಿಗೆ ಸತ್ಯಾಸತ್ಯತೆ ವರದಿ ಸಲ್ಲಿಸಿದ ವಕ್ಫ್ ಅಧ್ಯಕ್ಷ

# ವಕ್ಫ್ ಆಸ್ತಿ ಅತಿಕ್ರಮಣ ತೆರುವಿಗೆ ಕ್ರಮಕ್ಕೆ ಮನವಿ ಪ್ರಸ್ತಾವನೆ

**ಇಲಕಲ್ಲ :** ಇಲ್ಲಿಯ ಮುರ್ತುಜಾ ಷಾ ಖಾದ್ರಿ ದರ್ಗಾದಲ್ಲಿ ಹಾಗೂ ಅಲ್ಲಿಯ ಆಸ್ತಿಯ ಆವರಣದಲ್ಲಿ ಕಳೆದೆರಡು ತಿಂಗಳಿನಿಂದ ಅಸಮರ್ಪಕ ನಿರ್ವಹಣೆ ಇಲ್ಲದೆ ತ್ಯಾಜ್ಯ ತುಂಬಿದ್ದು ಅಲ್ಲಿಯ ಆಸ್ತಿಯಲ್ಲಿ ವಕ್ಫ್ ಮಂಡಳಿಯ ಅನುಮತಿ ಇಲ್ಲದೆ ಕೆಲವರು ಅನಧಿಕೃತ ಕೈಗಾರಿಕೆಗಳನ್ನು ಆರಂಭಿಸಿರುವುದು ಕಂಡು ಬಂದಿದೆ, ಇದರಿಂದ ಆಕ್ರಮಿಗಳು ವಕ್ಫ್ ಕಾಯ್ದೆಯನ್ನು ಸಂಪೂರ್ಣವಾಗಿ ಉಲ್ಲಂಘೀಸಿರುವುದು ಕಂಡು ಬರುತ್ತದೆ ಎಂದು ಜಿಲ್ಲಾ ವಕ್ಫ್ ಮಂಡಳಿಯ ಅಧ್ಯಕ್ಷ ಮೆಹಬೂಬ ಸರಕಾವಸ ತಿಳಿಸಿದರು.

ಅವರು ಸೋಮವಾರದಂದು ದರ್ಗಾದ ಆಡಳಿತಾಧಿಕಾರಿ ಹಾಗೂ ತಹಶೀಲ್ದಾರ ಸತೀಶ ಕೂಡಲಗಿ ರವರಿಗೆ ದರ್ಗಾ ಕುರಿತು ಸಾರ್ವಜನಿಕರಿಂದ ಬಂದ ದೂರು ಆಧರಿಸಿ ಸ್ಥಳ ಪರಿಶೀಲನೆ ಮಾಡಿ ಸಿದ್ಧಪಡಿಸಲಾದ ಸತ್ಯಾಸತ್ಯತೆಯ ವರದಿ ನೀಡಿ ಪತ್ರಕರ್ತರಿಗೆ ಮಾಹಿತಿ ನೀಡಿ–ದರು.







ಸ್ಥಳ ಪರಿಶೀಲನೆ ಸಂದರ್ಭ ದರ್ಗಾ ಆವರಣಕ್ಕೆ ಹೊದಾಗ ಮಸೀದಿಯಲ್ಲಿ ಧ್ವನಿವರ್ಧಕ ಹಾಗೂ ಯುಪಿಎಸ್ ತೊಂದರೆ ಇರುವುದು ಕಂಡು ಬಂದಿದೆ ದರ್ಗಾ ಒಳಭಾಗದಲ್ಲಿ ವಿದ್ಯುತ ಬಲ್ಪಗಳು ಕೆಟ್ಟಿದ್ದು ಸರಿಪಡಿಸಬೇಕಿದೆ, ಅಲ್ಲಲ್ಲಿ ಸ್ವಚ್ಚತೆ ಇಲ್ಲದಿರುವುದು ಕಂಡು ಬಂದಿದ್ದು ಪೌರಯುಕ್ತರ ಗಮನಕ್ಕೆ ತರಲು ವಿನಂತಿಸಲಾಗಿದೆ ಎಂದರು.

ದರ್ಗಾದ ಆಸ್ತಿಯಲ್ಲಿ ಜಮೀನಿನಲ್ಲಿ "ಸ್ಟಾರ್ ಗ್ಯಾರೇಜ್" ಎಂಬ ಹೆಸರಿನಿಂದ ಕೈಗಾರಿಕೆಯೊಂದು ತೆಲೆ ಎತ್ತರುವುದು ಕಂಡು ಬಂದಿದೆ ಈ ಘಟಕವು ವಕ್ಫ್ ಮಂಡಳಿಯಿಂದ ಯಾವುದೆ ರೀತಿಯ ಲೀಜ್ ಆಗಲಿ ಭಾಡಿಗೆ–ಯಾಗಲಿ ಪಡೆದಿರುವುದಿಲ್ಲ ಇದರಿಂದ ವಕ್ಫ್ ಕಾಯ್ದೆ 52 ಮತ್ತು 54 ಹಾಗೂ ಸಾರ್ವಜನಿಕ ಆವರಣ (ಅನಧಿಕೃತ ಒತ್ತುವರಿ ತೆರವು) ಕಾಯ್ದೆ 1974ರ ಉಲ್ಲಂಘನೆಯಾಗಿರುತ್ತದೆ, ಸದರಿ ಘಟಕನಗರಸಭೆ,ಮಾಲಿನ್ಯನಿಯಂತ್ರಣ ಮಂಡಳಿ, ಎಮ್.ಎಸ್.ಎಮ್.ಇ ಅಗ್ನಿಶಾಮಕ ಇಲಾಖೆ ಸೇರಿದಂತೆ ವಿದ್ಯುತ ಸಹ ಪಡೆದಿರುವುದು ಕಂಡು ಬಂದಿದ್ದು, ತಕ್ಷಣವೆ ಪರಿಶೀಲನೆ ಮಾಡಿ ಲೈಸನ್ಸ್ ಮತ್ತು ಪರವಾನಿಗೆಗಳನ್ನು ಪಡೆಯಲಾಗಿದೆಯೇ ಎಂದು ತನಿಖೆ ಮಾಡಲು ತಹಶೀಲ್ದಾರರನ್ನು ಕೋರಲಾಗಿದೆ ಎಂದರು.

**ವಕ್ಫ್ ಆಸ್ತಿಗಳ ರಕ್ಷಣೆಗಾಗಿ ವಕ್ಫ್ ಮಂಡಳಿಯಿಂದ ದರ್ಗಾದ ಆಸ್ತಿಗೆ ಕಂಪೌಂಡ ನಿರ್ಮಿಸಲು ಶಾಸಕ ವಿಜಯಾನಂದ ಕಾಶಪ್ಪನವರು ಮಂಡಳಿ ಅಧ್ಯಕ್ಷ ಕೆ. ಅನ್ವರಬಾಷಾ ರವರನ್ನು ಕೋರಿದ್ದರು ಅವರ ಕೋರಿಕೆಯಂತೆ ಸರ್ಕಾರದ ಆದೇಶ ಸಂಖ್ಯೆ: ಒಘಳ 28 ಘಲುಂ 2023 ಬೆಂಗಳೂರ ದಿ: 02–12–2023 ರ ಅನುಕ್ರಮ ಸಂಖ್ಯೆ 168ರಲ್ಲಿ 20 ಲಕ್ಷ ರೂ ಗಳನ್ನು ಮಂಜೂರಿ ಮಾಡಿದ್ದಾರೆ ಇದರಂತೆ ಇದೆ ಆದೇಶದ ಪ್ರತಿಯಲ್ಲಿ ಅ.ನಂ. ಸಂಖ್ಯೆ: 169ರಲ್ಲಿ 20 ಲಕ್ಷ ರೂಗಳ ಅನುದಾನ ಇಲಕಲ್ಲ ಅಂಜುಮನ್ ಸಂಸ್ಥೆಗೂ ಮಂಜೂರಿಸಿದ್ದು ಈ ಆದೇಶದ ಪ್ರತಿಯನ್ನು ಇದೆ ಸಂದರ್ಭದಲ್ಲಿ ತಹಶಿಲ್ದಾರರಿಗೆ ಸರ್ಕಾವಸ ನೀಡಿದ್ದಾರೆ.**

ದರ್ಗಾ ಆಡಳಿತಾಧಿಕಾರಿಗಳು

**ವಕ್ಫ್ ಕಾಯ್ದೆಯ ಪ್ರಕಾರ ತಪ್ಪು ಮಾಡಿರುವುದು ಕಂಡು ಬಂದರೆ ಗಂಭೀರವಾಗಿ ಪರಿಗಣಿಸಲಾಗುವುದು ಸರ್ಕಾರದ ಆದೇಶ ಮತ್ತು ನ್ಯಾಯಾಲಯದ ಆದೇಶದ ಕಟ್ಟು ನಿಟ್ಟಿನ ಪಾಲನೆಯಲ್ಲಿ ಯಾವುದೇ ಕಾರಣಕ್ಕೂ ಹಿಂಜರಿಕೆ ಮಾಡುವದಿಲ್ಲ.**

**। ಸತೀಶ ಕೂಡಲಗಿ**
**ತಹಶೀಲ್ದಾರರು ಇಲಕಲ್ಲ**

ಅನಧಿಕೃತ ನುಸುಳು ಖೋರರಿಗೆ ಕಾನೂನು ಪ್ರಕಾರ ನೋಟಿಸು ನೀಡಿ ದರ್ಗಾದ ಆಸ್ತಿ ರಕ್ಷಿಸಿ ಭಾಡಿಗೆ ನೀಡದೆ ಇರುವ ಕೈಗಾರಿಕಾ ಘಟಕವನ್ನು ತೆರವುಗೊಳಿಸಿ ಮುಂದಾಗುವ ಅವಘಡ ತಪ್ಪಿಸುವಂತೆ ವರದಿಯಲ್ಲಿ ಉಲ್ಲೇಖಿಸಿ ಮನವಿ ನೀಡಲಾಗಿದೆ ಎಂದು ಸರಕಾವಸ ತಿಳಿಸಿದ್ದಾರೆ. ಸೂಕ್ತ ಕ್ರಮಕ್ಕಾಗಿ ಪೌರಾಯುಕ್ತರು ನಗರಸಭೆ ಇಲಕಲ್ಲ ರವರಿಗೂ ಮನವಿ ಪ್ರತಿಯನ್ನು ನೀಡಿದ್ದೇನೆ ಎಂದಿದ್ದಾರೆ.

# ಮೂಡಲಗಿ: ಕೆಂಪೇಗೌಡ ಜಯಂತಿ



**ಮೂಡಲಗಿ :** ವಿಜಯ ನಗರ ಸಾಮ್ರಾಜದಲ್ಲಿ ಅವಿವಾಹಿತ ಮಹಿಳೆಯರು ತಮ್ಮ ಕಿರು ಬೆರಳನ್ನು ಕತ್ತರಿಸುತ್ತಿದ್ದ ಪದ್ದತ್ತಿಯನ್ನು ರದ್ದು ಮಾಡಿದ್ದು ಕೆಂಪೇಗೌಡರು, ವಿಜಯನಗರ ಸಾಮ್ರಾಜ್ಯದ ಸಾಮಂತ ರಾಜ್ಯವಾಗಿದ್ದ ಯಲಹಂಕ ನಾಡಿನ ಪಾಳೇಗಾರ ಹಂಪಿಯ ವೈಭವವನ್ನು ಕಂಡು ಬೆರಗಾಗಿದ್ದ ಕೆಂಪೇಗೌಡರು ದೂರದೃಷ್ಟಿಯಿಂದ ನಿರ್ಮಿಸಿದ ಬೆಂಗಳೂರು ಈಗ ರಾಜ್ಯದ ರಾಜಧಾನಿಯಾಗಿದೆ ಎಂದು ನಾಗನೂರ ಸರ್ಕಾರಿ ಪಿ ಯು ಕಾಲೇಜಿನ ಉಪನ್ಯಾಸಕ ಅಪ್ಪಯ್ಯ ಗುದ್ಲಿ ಹೇಳಿದರು

ಗುರುವಾರ ಶ್ರೀ ಪಾದಬೋಧ ಸರ್ಕಾರಿ ಪ್ರಥಮ ದರ್ಜೆ ಪದವಿ ಮಹಾವಿದ್ಯಾಲಯದಲ್ಲಿ ಕನ್ನಡ ಮತ್ತು ಸಂಸ್ಕøತಿ ಇಲಾಖೆ ಹಾಗೂ ತಾಲೂಕಾಡಳಿತ ಸಹಯೋಗದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿಯಲ್ಲಿ ಉಪನ್ಯಾಸ ನೀಡಿ ಮಾತನಾಡಿದರು.

ಕೆಂಪೇಗೌಡರು ಮಲ್ಲಯುದ್ದದಲ್ಲಿ ಭಾಗಿಯಾಗಿ ಗೆಲವು ಸಾಧಿಸುತ್ತಾರೆ ಇದು ಇವರ ಧೈರ್ಯದ ಒಂದು ಭಾಗಿದೆ. ನೀರಿನ ಸಮಸ್ಯ ಬಾರದಂತೆ ಕೆಂಪೇಗೌಡರು ಬೆಂಗಳೂರಿನಲ್ಲಿ ಇಂದಿಗೂ ನಿರ್ಮಿಸಿದ ಕೆರೆಗಳನ್ನು ಕಾಣಬಹುದಾಗಿದೆ. ವೃತ್ತಿಯಾದಾರಿತ ಮಾರುಕಟ್ಟೆ ನಿರ್ಮಾಣ. ಗವಿ ಗಂಗಾಧರ ಹಾಗೂ ಹಲವು ದೇವಾಲಯ ನಿರ್ಮಾಣ ಜೀರ್ಣೋದ್ಧಾರ. ಅನಾಥರಿಗೆ ವಸತಿ. ಮಕ್ಕಳಿಗೆ ಶಿಕ್ಷಣ ವವ್ಯಸ್ಥೆ ಹಿಂದಿನ ಕಾಲದಲ್ಲಿಯೇ ಮಾಡಿದ್ದಾರೆ ಎಂದರು,

ಕ್ಷೇತ್ರ ಶಿಕ್ಷಣಾಧಿಕಾರಿ ಅಜೀತ ಮನ್ನಿಕೇರಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿ. ಯಲಕಂಹದ ದೂರೆ. ವಿಜಯನಗರದ ಸಾಮ್ರಾಜದ ಸಾಮಂತ ರಾಜ್ಯ ಕೆಂಪೇಗೌಡ ದೂರದೃಷ್ಟಿಯ ಪರಿಣಾಮವಾಗಿ ಇಂದು ಬೆಂಗಳೂರ ಅಂತಂತ್ಯ ಬೃಹದಾಕಾರವಾಗಿ ಬೆಳೆದು ನಿತ್ತಿದೆ ಎಂದರೆ ಅದು ಅವರ ಕನಸಾಗಿತ್ತು ಎಂದರು,

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ತಹಶೀಲ್ದಾರ ಮಹಾದೇವ ಸನಮೂರಿ ಮಾತನಾಡಿ, ಬಾಲ್ಯದಿಂದ ಶ್ರೀಕೃಷ್ಣದೇವರಾಯರ ಆಡಳಿತಾವಧಿಯ ಧಾರ್ಮಿಕ ಹಾಗೂ ಸಾಂಸ್ಕøತಿಕ ಸಿರಿಯನ್ನು ಕಣ್ಣಾರೆ ಕಂಡಿದ್ದ ಕೆಂಪೇಗೌಡರಿಗೆ ತಮ್ಮ ನಾಡಿನಲ್ಲೂ ಈ ಎಲ್ಲಾ ವೈಭವಗಳನ್ನು ನೋಡಬೇಕು ಎಂಬ ಬಯಕೆಯಿಂದ ಹಂಪಿಗೆ ಭೇಟಿ ಕೊಟ್ಟು ನಗರಗಳನ್ನು ಸ್ಥಾಪಿಸಿದ ಕಿರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ ಎಂದರು

ವೇದಿಕೆಯಲ್ಲಿ ತಾ.ಪಂ ಸಿ ಇ ಒ ಎಫ್ ಜಿ ಚಿನ್ನನವರ.ಮಹಾವಿದ್ಯಾಲಯದ ಪ್ರಾಚಾರ್ಯ ಮಹೇಶ ಕಂಬಾರ ಉಪಸ್ಥಿತರಿದ್ದರು,

ಮುಂಜಾನೆ ನಗರದ ಪ್ರಮುಖ ರಸ್ತೆಯಲ್ಲಿ ಕೆಂಪೇಗೌಡ ಭಾವಚಿತ್ರ ಮೆರವಣಿಗೆ ಶಾಲಾ. ಕಾಲೇಜಿನ ವಿದ್ಯಾರ್ಥಿಗಳು ಅಧಿಕಾರಿಗಳು ಉಪಸ್ಥಿತಿಯಲ್ಲಿ ಜರುಗಿತು. ಟಿ ಬಸವರಾಜ ನಿರೋಪಿಸಿದರು, ಶೀರಸ್ಥೆದಾರ ಪರಶುರಾಮ ನಾಯ್ಕ ವಂದಿಸಿದರು.

# ಸರ್ಕಾರ ಯಾವುದೇ ಟ್ಯಾಕ್ಸ್ ಹಾಕದೇ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ: ಸಚಿವ ಚೆಲುವರಾಯಸ್ವಾಮಿ

**ಬೆಳಗಾವಿ :** "ಯಾವುದೇ ಸರ್ಕಾರ ವರ್ಷದಿಂದ ವರ್ಷಕ್ಕೆ ಮುಂದೆ ಹೋದಾಗ ಎಲ್ಲ ಬೆಲೆಗಳು ಏರಿಕೆ ಆಗುತ್ತವೆ. ಕಳೆದ ವರ್ಷ ಮಾಡಿದ ಯಾವುದೇ ಅಭಿವೃದ್ಧಿ ಕೆಲಸ ಶೇ.10 ರಷ್ಟು ಸಾಮಾನ್ಯವಾಗಿ ಏರಿಕೆಯಾಗುತ್ತದೆ" ಎಂದು ಕೃಷಿ ಸಚಿವ ಚೆಲುವರಾಯಸ್ವಾಮಿ ಹೇಳಿದರು.




ಜಿಲ್ಲಾ ಕಾಂಗ್ರೆಸ್ ಭವನದಲ್ಲಿಂದು ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, "ರೈತರಿಗೆ ಕೊಡುವ ಸಬ್ಸಿಡಿ, ಅನುದಾನ ಕೂಡ ಏರಿಕೆ ಆಗುತ್ತದೆ. ಸರ್ಕಾರ ಯಾವುದೇ ಟ್ಯಾಕ್ಸ್ ಹಾಕದೇ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ಅವೈಜ್ಞಾನಿಕವಾಗಿ ಬೆಲೆ ಏರಿಕೆ ಮಾಡಿದಾಗ ತಪ್ಪು ಅನ್ನಬಹುದು, ಆಗ ಪ್ರಶ್ನೆ ಮಾಡಬಹುದು" ಎಂದರು.

"ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ದರ ಮತ್ತು ಸೆಸ್ ಏರಿಕೆ ಮಾಡಿತ್ತು. ಕರ್ನಾಟಕಕ್ಕೆ ಬರಬೇಕಿದ್ದ ಅನುದಾನವನ್ನು ಕೂಡ ಕೇಂದ್ರ ಸರ್ಕಾರ ಕೊಟ್ಟಿಲ್ಲ. ಮಹಾರಾಷ್ಟ್ರ, ತೆಲಂಗಾಣ ಸೇರಿ ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಪೆಟ್ರೋಲ್ ಬೆಲೆ ಕಮ್ಮಿ ಇದೆ" ಎಂದು ಸಚಿವರು ಸಮರ್ಥಿಸಿಕೊಂಡರು.

"ಮಳೆಗಾಲದಲ್ಲಿ ಹಾಲು ಹೆಚ್ಚು ಶೇಖರಣೆ ಆಗಲಿದ್ದು, ಹಾಗಾಗಿ, 50 ಎಂಎಲ್ ಹೆಚ್ಚು ಮಾಡಿದ್ದೇವೆ. ಎರಡು ರೂ. ದರ ಹೆಚ್ಚಿಸುವ ಜೊತೆಗೆ 50 ಎಂಎಲ್ ಹಾಲು ಕೂಡ ಹೆಚ್ಚಿಸಿದ್ದೇವೆ. ರೈತರಿಗೆ ಈಗಾಗಲೇ ಐದು ರೂಪಾಯಿ ಪ್ರೋತ್ಸಾಹಧನ ಕೊಡ್ತಿದ್ದೇವೆ. ಹಾಗಾಗಿ, ಹೆಚ್ಚುವರಿ ಹಣ ಕೊಡಲ್ಲ. ಹಾಲು ಹೆಚ್ಚು ಉತ್ಪಾದನೆ ಆಗ್ತಿತ್ತು ಅದನ್ನ ಕೊಳ್ಳಲು 50 ಎಂಎಲ್ ಜಾಸ್ತಿ ಮಾಡಿದ್ದೇವೆ. ಅದಕ್ಕೆ ಎರಡು ರೂಪಾಯಿ ಪಡೆಯುತ್ತಿದ್ದೇವೆ" ಎಂದು ಹೇಳಿದರು.

ಗ್ಯಾರಂಟಿ ಯೋಜನೆಯಿಂದ ಸರ್ಕಾರದ ಖಜಾನೆ ಖಾಲಿ ಎಂದು ಪ್ರತಿಪಕ್ಷಗಳ ಆರೋಪಕ್ಕೆ ಪ್ರತಿಕ್ರಿಯಿಸಿ, "ಹೊಸ ಸರ್ಕಾರ ಬಂದ ಮೇಲೆ ಗ್ಯಾರಂಟಿ ಕೊಟ್ಟು ಯಾವುದೇ ಅಭಿವೃದ್ಧಿ ನಿಲ್ಲಿಸಿಲ್ಲ. ಐದು ವರ್ಷ ಬಿಜೆಪಿಯವರು ಫೇಲ್ ಆಗಿದ್ದ-ಕ್ಕೆ ಜನ ನಮಗೆ ಅಧಿಕಾರ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರ ನಮಗೆ ಕೊಡಬೇಕಾದ ಎನ್‌ಡಿಆರ್‌ಎಫ್ ಅನುದಾನ ಕೊಡಲಿಲ್ಲ. ಸುಪ್ರೀಂ ಕೋರ್ಟ್‌ಗೆ ಹೋಗಿ ನಾವು ಅನುದಾನ ತಂದಿದ್ದೇವೆ. ವಿರೋಧ ಪಕ್ಷದವರಿಗೆ ಕೆಲಸ ಇಲ್ಲಾ, ಹಾಗಾಗಿ ಏನೇನೋ ಮಾತಾಡ್ತಿದ್ದಾರೆ" ಎಂದು ಕಿಡಿಕಾರಿದರು.

ಚನ್ನಪಟ್ಟಣದಲ್ಲಿ ಡಿ.ಕೆ. ಶಿವಕುಮಾರ್ ವಾಸ್ತವ್ಯ ವಿಚಾರಕ್ಕೆ ಪ್ರತಿಕ್ರಿಯಿಸಿ, "ಅವರು ಅಧ್ಯಕ್ಷರು, ಕ್ಷೇತ್ರದ ವಿಚಾರ ನೋಡಿಕೊಳ್ಳುತ್ತಿದ್ದಾರೆ. ಚನ್ನಪಟ್ಟಣಕ್ಕೆ ಯಾವಾಗ ಬೇಕಾದರೂ ಚುನಾವಣೆ ಘೋಷಣೆ ಆಗಬಹುದು. ಇನ್ನು ಡಿಕೆಶಿ ಅಥವಾ ಡಿ.ಕೆ. ಸುರೇಶ್ ಯಾರು ಅಭ್ಯರ್ಥಿ ಅಂತ ತೀರ್ಮಾನ ಆಗಿಲ್ಲ. ಈ ಬಗ್ಗೆ ಸಿಎಂ, ಡಿಸಿಎಂ ಕುಳಿತು ಚರ್ಚೆ ಮಾಡುತ್ತಾರೆ" ಎಂದು ತಿಳಿಸಿದರು.

ಮಂಡ್ಯದಲ್ಲಿ ನನ್ನನ್ನು ಸೋಲಿಸಲು ಯತ್ನಿಸಿದ್ರು ಎಂಬ ಕೇಂದ್ರ ಸಚಿವ ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿ, "ನಮ್ಮನ್ನೂ ಸೋಲಿಸಲು ನೋಡಿದರು. ಆದರೂ ಜನ ಗೆಲ್ಲಿಸಿದ್ದಾರೆ. ನಾನು ಜೆಡಿಎಸ್ ನಲ್ಲಿ ಇಲ್ಲಾ, ನಮ್ಮ ಪಕ್ಷದ ಪರವಾಗಿ ಕೆಲಸ ಮಾಡಬೇಕು. ನಮ್ಮ ಅಭ್ಯರ್ಥಿ ಗೆಲ್ಲಿಸಲು ಕೆಲಸ ಮಾಡಿದ್ದೇವೆ. ಕುಮಾರಸ್ವಾಮಿ ಅವರು ಕೆಲಸ ಮಾಡಲಿ. ಒಂದು ವರ್ಷ ಏನೂ ಮಾತಾಡಲ್ಲ. ಕುಮಾರಸ್ವಾಮಿ ಹೊಸದಾಗಿ ಕೇಂದ್ರದಲ್ಲಿ ಮಂತ್ರಿ ಆಗಿದ್ದಾರೆ. ತಂದೆ ಮಾಡಲು ಆಗದ ಕೆಲಸ ಮಾಡ್ತೇನಿ ಅಂತಾ ಭರವಸೆ ಕೊಟ್ಟಿದ್ದಾರೆ. ಅವರು ಕೆಲಸ ಮಾಡಿದ್ರೇ ನಾನು ಹೆಚ್ಚು ಖುಷಿ ಪಡುತ್ತೇನೆ. ಈಗ ಕುಮಾರಸ್ವಾಮಿ ಬಗ್ಗೆ ಟೀಕೆ ಟಿಪ್ಪಣಿ ಮಾಡಲ್ಲ" ಎಂದರು.

**ರಾಜ್ಯದಲ್ಲಿ 7 ಹೊಸ ಕೃಷಿ ತರಬೇತಿ ಕೇಂದ್ರ:**

ಮತ್ತೊಂದೆಡೆ, ಬೆಳಗಾವಿ ಸುವರ್ಣಸೌಧ ಸಭಾಂಗಣದಲ್ಲಿ ಕೃಷಿ ಮತ್ತು ಜಲಾನಯನ ಇಲಾಖೆಗಳ ವಿಭಾಗೀಯ ಮಟ್ಟದ ಸಭೆ ನಡೆಸಿ ಮಾತನಾಡಿದ ಸಚಿವ ಚೆಲುವರಾಯಸ್ವಾಮಿ, ರಾಜ್ಯದಲ್ಲಿ ಈ ವರ್ಷ 7 ಜಿಲ್ಲೆಗಳಲ್ಲಿ ಹೊಸದಾಗಿ ಕೃಷಿ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು. ಕೃಷಿಕರಿಗೆ ಯೋಜಿತ ತರಬೇತಿ ನೀಡಿ ಸಾಮರ್ಥ್ಯ ಅಭಿವೃದ್ಧಿಗೆ ಕ್ರಮವಹಿಸಲಾಗುತ್ತಿದೆ. ವಿಜಯನಗರ, ಯಾದಗಿರಿ, ಗದಗ, ಕೋಲಾರ, ಚಾಮರಾಜನಗರ, ರಾಮನಗರ, ಉಡುಪಿ ಜಿಲ್ಲೆಗಳಲ್ಲಿ ಹೊಸ ಕೃಷಿ ತರಬೇತಿ ಕೇಂದ್ರ ಪ್ರಾರಂಭ ಮಾಡಲಾಗುವುದು ಎಂದರು.

# ಲಂಚ ಪಡೆದ ಆರೋಪಿಗೆ ಶಿಕ್ಷೆ & ದಂಡ

**ಬಾಗಲಕೋಟೆ :** ಲಂಚಕ್ಕೆ ಬೇಡಿಕೆ ಇಟ್ಟು ಲೋಕಾಯುಕ್ತರ ಬಲೆಗೆ ಸಿಕ್ಕಬಿದ್ದ ಬಾಗಲಕೋಟೆ ತಹಶೀಲ್ದಾರ ಕಚೇರಿಯ ಪ್ರಥಮ ದರ್ಜೆ ಸಹಾಯಕ ವಿನೋದ ಕೃಷ್ಣಪ್ಪ ಪತ್ತಾರ ಎಂಬ ಆರೋಪಿಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಶಿಕ್ಷೆ ಮತ್ತು ದಂಡ ವಿಧಿಸಿ ಆದೇಶಿಸಿದೆ. ಸದರಿ ಆರೋಪಿ 50 ಸಾವಿರ ರೂ.ಗಳ ಬೇಡಿಕೆ ಇಟ್ಟ ಬಗ್ಗೆ ಎಸಿಬಿ ಠಾಣೆಗೆ ರವಿ ಯಶವಂತ ಶಿಂಧೆ ದೂರು ನೀಡಿದ್ದರು. ದಾಳಿ ವೇಳೆಯಲ್ಲಿ 25 ಸಾವಿರ ರೂ.ಗಳ ಲಂಚ ಪಡೆಯುವ ವೇಳೆ ಸಿಕ್ಕಿದ್ದು, ಈ ಬಗ್ಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ವಿಚಾರಣೆ ನಡೆಸಿದ ಆಪಾದಿತನಿಗೆ ಕಲಂ 7 ಪಿಸಿ ಕಾಯ್ದೆ 1988ರಲ್ಲಿ 3 ವರ್ಷ ಸಾಧಾ ಶಿಕ್ಷೆ ಮತ್ತು 5 ಸಾವಿರ ದಂಡ ಹಾಗೂ ಕಲಂ 13(1)ಲ ಸಹ ಕಲಂ 13(2) ಪಿಸಿ ಕಾಯ್ದೆ 1988 ರಲ್ಲಿ 4 ವರ್ಷ ಕಠಿಣ ಶಿಕ್ಷೆ ಹಾಗೂ 10 ಸಾವಿರ ದಂಡ ವಿಧಿಸಿ ಆದೇಶ ಹೊರಡಿಸಿದೆ. ಸದರಿ ಪ್ರಕರಣವನ್ನು ಬಾಗಲಕೋಟೆ ಎಸಿಬಿಯ ಪೋಲಿಸ್ ಇನ್ಸಪೆಕ್ಟರ ಆರ್.ಎಚ್.ಹಳ್ಳೂರ ತನಿಖೆ ಕೈಗೊಂಡು ನ್ಯಾಯಾಲಯಕ್ಕೆ ದೋಷಾರೋಪನಾ ಪತ್ರ ಸಲ್ಲಿಸಿದ್ದರು. ವಿಶೇಷ ಸರಕಾರಿ ಅಭಿಯೋಜಕ ಕೆ.ಟಿ.ಅಬ್ಬಿಗೇರಿ ಪ್ರಕರಣದಲ್ಲಿ ವಾದ ಮಂಡಿಸಿರುತ್ತಾರೆ.

# ಅಂತರರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ ವಿರೋಧಿ ದಿನಾಚರಣೆ

**ಕೊಲ್ಹಾರ :** ಈಚಿನ ದಿನಗಳಲ್ಲಿ16ರಿಂದ 20 ವರ್ಷದ ಯುವಕರುಮಾದಕ ವಸ್ತುಗಳ ದಾಸರಾಗುತ್ತಿದ್ದಾರೆ. ಹೆಣು-ಗಂಡು ಎಂಬ ಭೇದವಿಲ್ಲದೇ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳ ಭವಿಷ್ಯ ಇದರಿಂದ ಹಾಳಾಗುತ್ತಿದೆ ಎಂದು ಪಿಎಸ್ಐ ಪ್ರವೀಣ್ ಗೆರೆಬಾಳ ಹೇಳಿದರು.



ಪಟ್ಟಣದ ಸರ್ಕಾರಿ ಪ್ರೌಢಶಾಲೆ ಮತ್ತು ಸಂಗಮೇಶ್ವರ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಮಂಗಳವಾರ ಪೊಲೀಸ್ ಇಲಾಖೆ ಇಂದ ಆಯೋಜಿಸಲಾದ ಅಂತರರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ ವಿರೋಧಿ ದಿನಾಚರಣೆಯ ಅಂಗವಾಗಿ ಮಾದಕ ವಸ್ತುಗಳ ನಿಷೇಧ ಕುರಿತು ಜಾಗೃತಿ ಮೂಡಿಸಿ ಅವರು ಮಾತನಾಡಿದರು ಮಕ್ಕಳನ್ನು ದಾರಿತಪ್ಪದಂತೆ ನೋಡಿಕೊಳ್ಳಲು ಪಾಲಕರು ಕುಟುಂಬದಲ್ಲಿ ಸೌಹಾರ್ದ ವಾತಾವರಣ ಮೂಡಿಸಬೇಕು. ಮನೆಯಲ್ಲಿ ಆರೋಗ್ಯಕರ ಪರಿಸರ ಇರಬೇಕು ಎಂದು ಅವರು ಸಲಹೆ ನೀಡಿದರು.

ಕುಟುಂಬ ಪ್ರೀತಿಯಿಂದ ವಂಚಿತರಾದವರೇ ಹೆಚ್ಚಾಗಿಮಾದಕ ವಸ್ತುಗಳ ವ್ಯಸನಕ್ಕೆ ಒಳಗಾಗುತ್ತಿದ್ದಾರೆ. ಹಿರಿಯರ ಮಾರ್ಗದರ್ಶನ ದೊರೆತ-ರೆ ಮಕ್ಕಳು ಪರಿಪೂರ್ಣ ವ್ಯಕ್ತಿಗಳಾಗಿ ರೂಪುಗೊಳ್ಳುತ್ತಾರೆ.

ಇಲ್ಲದಿದ್ದರೆ ಸಮಾಜ ವಿರೋಧಿ ಶಕ್ತಿಗಳ ಜತೆ ಸೇರುವ ಸಾಧ್ಯತೆ ಇರುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು. ಸಂಗಮೇಶ್ವರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ಆನಂದ ಚವ್ಹಾಣ ಮಾತನಾಡಿದರು. ಈ ಸಂದರ್ಭದಲ್ಲಿ ಮಂಜುನಾಥ್ ಮಟ್ಟಿಹಾಳ,ರಮೇಶ್ ತೋಟದ,ಶ್ರೀಮತಿ ಡಂಬಳ, ಶೀಲಾ ಮಠಪತಿ,ಹಾಗೂ ಪೊಲೀಸ ಸಿಬ್ಬಂದಿ ಬಸಯ್ಯ ಮಠಪತಿ,ಮಮದಾಪೂರ ಸೇರಿದಂತೆ ವಿದ್ಯಾರ್ಥಿಗಳು ಉಪಸ್ತಿತರಿದ್ದರು.

# ವಟಸಾವಿತ್ರಿ ವ್ರತದಿಂದ ಮುತ್ತೈದೆತನದ ಭಾಗ್ಯ

**ರಬಕವಿ-ಬನಹಟ್ಟಿ :** ವಟ ಸಾವಿತ್ರಿ ವ್ರತವೆಂಬುದು ವಿಶೇಷವೆಂಬುದು ವಿಶೇಷ ಜೇಷ್ಠ ಮಾಸದ ಸುಕ್ಲಪಕ್ಷದ ವಟಪೂರ್ಣಿಮೆ ದಿನದಂದು ಕಾರಣ ಹುಣ್ಣಿಮೆಯಂದು ಆಚರಣೆ ಮಾಡಲಾಗುತ್ತದೆ ಎಂದು ಹಿರೇಮಠದ ಶ್ರೀ ಮಹಾಂತಯ್ಯ ಹಿರೇಮಠ ಹೇಳಿದರು.

ಬನಹಟ್ಟಿಯಲ್ಲಿ ವಟ ಸಾವಿತ್ರಿ ಆಚರಣೆ ನಿಮಿತ್ತ ಆಶೀರ್ವಚನದಲ್ಲಿ ಮಾತನಾಡಿದ ಅವರು, ಆಲದ ಮರ ಆಯುಷ್ಯ ಆರೋಗ್ಯ ತಮ್ಮ ಪತಿಗೆ ದಯಪಾಲಿಸಲಿ ಎಂಬ ಉದ್ದೇಶ ಹೊತ್ತು ದೀರ್ಘ ಸುಮಂಗಲೆಯರಾಗಿ ಬಾಳಬೇಕೆಂಬ ಉದ್ದೇಶದಿಂದ ಈ ಮಹಾಪೂಜೆಯನ್ನು ಸುಮಂಗಲೆಯರು ಗೈಯುತ್ತಾರೆಂದರು.



ನಗರದಲ್ಲಿನ ನೂರಾರು ಸುಮಂಗಲೆಯರು ಅಲ್ಲಲ್ಲಿ ಆಲದ ಮರಗಳಿಗೆ ತೆರಳಿ ವಿಶೇಷ ಪೂಜೆ ಸಲ್ಲಿಸಿ ತಮ್ಮ ಭಕ್ತಿ ಮೆರೆದರು.

# ಬಿ.ವಿ.ವಿ.ಸಂಘದ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಕ್ಷಿತಿಜ 2024 ಖನಿಜ ಹಾಗೂ ಅದಿರುಗಳ ಭೂಗರ್ಭ ಶಾಸ್ತ್ರ ಮೊದಲ ಸೇತುಬಂಧ ಕಾರ್ಯಾಗಾರ

**ಬಾಗಲಕೋಟೆ :** ಭೂಗರ್ಭ ಶಾಸ್ತ್ರದ ಅನುಸಾರ ಖನಿಜ ಹಾಗೂ ಅಧಿರುಗಳಲ್ಲಿ ಔಷಧಿಯಅಧ್ಯಯನಹಾಗೂಗುರುತಿಸುವಿಕೆ ಮುಖ್ಯ ಎಂದು ಜಿ.ಎಸ್.ವಿಜ್ಞಾನ ಮಹಾವಿದ್ಯಾಲಯದ ಭೂಗರ್ಭ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ॥ ಪ್ರಮೋದ ಹನಮಗೊಂಡ ಹೇಳಿದರು.



ಅವರು ಬಿ.ವಿ.ವಿ.ಸಂಘದ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ರಸಶಾಸ್ತ್ರ ಭೈಷಜ್ಯ ಕಲ್ಪನಾ ವಿಭಾಗ ಹಾಗೂ ಗೋವಿಂದರಾಮ ಸಕ್ಸಾರಿಯಿ ವಿಜ್ಞಾನ ಮಹಾವಿದ್ಯಾಲಯ ಬೆಳಗಾವಿ ಇವರ ಸಹಭಾಗಿತ್ವದಲ್ಲಿ ' ಕ್ಷಿತಿಜ 2024' " ಖನಿಜ ಹಾಗೂ ಅದಿರುಗಳ ಭೂಗರ್ಭ ಶಾಸ್ತ್ರ" ಮೊದಲ ಸೇತುಬಂಧ ಕಾರ್ಯಾಗಾರದಲಿ ವಿಷಯ ತಜ್ಞರಾಗಿ ಮಾತನಾಡಿದರು.

ಅವರು ಖನಿಜ ಹಾಗೂ ಅಧಿರುಗಳ ಅಧ್ಯಯನ, ಭೂಗರ್ಭ ಶಾಸ್ತ್ರದ ಅನುಸಾರ ಗುರುತಿಸುವಿಕೆ, ಹಾಗೂ ಅವುಗಳ ಔಷಧಿಯ ಉಪಯೋಗಗಳ ಬಗ್ಗೆ ಮಾಹಿತಿ ನೀಡಿತ್ತಾ, ಮಾನವ ಪೋಷಣೆಯು ಸೂಕ್ಷ್ಮ ಪೋಷಕಾಂಶ-ಭರಿತ ಆಹಾರಗಳು ಜೀವಕೋಶಗಳನ್ನು ನಿರ್ಮಿಸಲು, ಅಪಾಯಕಾರಿಸೋಂಕುಗಳನ್ನುಎದುರಿಸಲು ಮತ್ತು ಪ್ರತಿರಕ್ಷಣಾ ವ್ಯವಸ್ಥೆಯನ್ನು ಹೆಚ್ಚಿಸಲು ಖನಿಜ ಹಾಗೂ ಅದಿರುಗಳಲ್ಲಿನ ಔಷದಿಗಳು ಸಹಾಯ ಮಾಡುತ್ತವೆ ಎಂದರು

ಇನ್ನೋರ್ವ ಅತಿಥಿಗಳಾದ ಡಾ॥ ರಾಜು ಸುಖಾಯೆ ಹಾಗೂ ಡಾ॥ ಸೂರಜ ಮೆಣಸೆ ಪಾಲ್ಗೊಂಡು ಉಪನ್ಯಾಸ ಹಾಗೂ ಖನಿಜ ಹಾಗೂ ಅದಿರುಗಳ ಭೂಗರ್ಭ ಶಾಸ್ತ್ರದ ಅನುಸಾರ ಗುರುತಿಸುವಿಕೆಯನ್ನು ಪ್ರಾತ್ಯಕ್ಷಿಕವಾಗಿ ನೆರವೇರಿಸಿಕೊಟ್ಟರು.

ಕಾರ್ಯಕ್ರಮದಅಧ್ಯಕ್ಷತೆವಹಿಸಿಮಾತನಾಡಿದ ಆಯುರ್ವೇದ ಮಹಾವಿದ್ಯಾಲಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷರಾದ ಮಲ್ಲಿಕಾರ್ಜುನ ಸಾಸನೂರ ಅವರು ಖನಿಜ ಹಾಗೂ ಅದಿರುಗಳ ಅಧ್ಯಯನ ಆಯುರ್ವೇದ ಔಷಧಿಯ ನಿರ್ಮಾಣದಲ್ಲಿ ಪ್ರಮುಖವಾಗಿದ್ದು ವಿದ್ಯಾರ್ಥಿಗಳು ಇದರ ಸಂಪೂರ್ಣ ಪ್ರಯೋಜನ ಪಡೆದುಕೊಳ್ಳಬೇಕು, ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಅವರ ಆಶಯದಂತೆ ಮಹಾವಿದ್ಯಾಲಯದಲ್ಲಿ ಪ್ರತ್ಯೇಕವಾಗಿ ಖನಿಜ ಹಾಗೂ ಅದಿರುಗಳ ಮ್ಯೂಸಿಯಂ ನಿರ್ಮಾಣ ಮಾಡಲಾಗುವುದೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಿ.ವಿ.ವಿ.ಎಸ್ ಆಯುರ್ವೇದ ಮಹಾವಿದ್ಯಾಲಯವು ಜಿ.ಎಸ್.ವಿಜ್ಞಾನ ಮಹಾವಿದ್ಯಾಲಯದೊಂದಿಗೆ ತಿಳುವಳಿಕೆ ಒಡಂಬಡಿಕೆ ಪತ್ರಗಳಿಗೆ ರುಜುಮಾಡಲಾಯಿತು. ಮುಂಬರುವ ದಿನಗಳಲ್ಲಿ ಪರಸ್ಪರ ವಿದ್ಯಾಲಯಗಳು ಶೈಕ್ಷಣಿಕ ಹಾಗೂ ಇನ್ನಿತರ ಕಾರ್ಯಕ್ರಮಗಳ ಸಹಭಾಗಿತ್ವಕ್ಕೆ ಒಪ್ಪಿಗೆ ಸೂಚಿಸಲಾಯಿತು.

ಕಾರ್ಯಕ್ರಮದಲ್ಲಿ ರಸಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ॥ ಪ್ರಕಾಶ ದೇಶಪಾಂಡೆ. ಪ್ರಭಾರಿ ಪ್ರಾಚಾರ್ಯ ಡಾ॥ ಎಂ. ಎಸ್. ಹಿರೇಮಠ. ಮಹಾವಿದ್ಯಾಲಯ ಪ್ರಾಧ್ಯಾಪಕರು ಹಾಗೂ ಉಪನ್ಯಾಸಕರು, ದ್ವಿತೀಯ ಬಿ.ಎ.ಎಂ.ಎಸ್ ವಿದ್ಯಾರ್ಥಿಗಳಿಗೆ, ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಿದ್ದರು.

> ಖನಿಜ ಹಾಗೂ ಅದಿರುಗಳ ಅಧ್ಯಯನ ಆಯುರ್ವೇದ ಔಷಧಿಯ ನಿರ್ಮಾಣದಲ್ಲಿ ಪ್ರಮುಖವಾಗಿದ್ದು, ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಅವರ ಆಶಯದಂತೆ ಮಹಾವಿದ್ಯಾಲಯದಲ್ಲಿ ಪ್ರತ್ಯೇಕವಾಗಿ ಖನಿಜ ಹಾಗೂ ಅದಿರುಗಳ ಮ್ಯೂಸಿಯಂ ನಿರ್ಮಾಣ ಮಾಡಲಾಗುವುದು.
>
> । ಮಲ್ಲಿಕಾರ್ಜುನ ಸಾಸನೂರ.
> **ಕಾರ್ಯಾಧ್ಯಕ್ಷರು ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಆಡಳಿತ ಮಂಡಳಿ.**

# ಮುರಳಿಧರ ಕುಲಕರ್ಣಿಗೆ ಶಿಕ್ಷಣ ಮತ್ತು ಸಮಾಜ ಸೇವಾ ರತ್ನ ರಾಜ್ಯ ಪ್ರಶಸ್ತಿ

**ಕೊಲ್ಹಾರ :** ಬೆಂಗಳೂರಿನ ರಾಜಾಜಿನಗರದ ಸೇಂಟ್ ಆನ್ಸ್ ಪ್ರೌಢ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತೀರುವ ಕೊಲ್ಹಾರ ಪಟ್ಟಣದ ಚಿತ್ರಕಲಾ ಶಿಕ್ಷಕ ಮುರಳಿಧರ ಕುಲಕರ್ಣಿಗೆ ಶಿಕ್ಷಣ ಮತ್ತು ಸಮಾಜ ಸೇವಾ ರತ್ನ ರಾಜ್ಯ ಪ್ರಶಸ್ತಿ ಲಭಿಸಿದೆ.



ಜೂ.23 ರಂದು ಮೈಸೂರಿನ ಪುರಭವನ(ಟೌನ್ ಹಾಲ್ ) ನಲ್ಲಿ ನಡೆದ ಮೈಸೂರ ಪ್ರೆಸ್ ಕ್ಲಬ್ ನ 17 ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ 2024 ನೇ ಸಾಲಿಗೆ ಕೊಡಮಾಡುವಶಿಕ್ಷಣಮತ್ತುಸಮಾಜ ಸೇವಾ ರತ್ನಶ್ರೇಷ್ಠರಾಜ್ಯಪ್ರಶಸ್ತಿಯನ್ನು ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿದ ಮೇಲುಕೋಟೆ ವಂಗೀಪುರ ನಂಬಿಮಠದ ಇಳೈ ಆಳ್ವಾರ್ ಸ್ವಾಮೀಜಿಗಳು, ಉದ್ಘಾಟನೆ ನೇರವೇರಿಸಿದ ರಘುರಾಮ ವಾಜಪೇಯಿ, ಅಧ್ಯಕ್ಷತೆಯನ್ನು ವಹಿಸಿದ್ದ ಡಾ.ಎಸ್.ವೆಂಕಟೇಶ ಹಾಗೂ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಡಾ. ಸೀತಾರಾಮೇಗೌಡ, ಮಡಿಕೇರಿ ಗೋಪಾಲ ವಿತರಿಸಿದರು.

# ಬಯಲಿನಲ್ಲಿ ಗ್ರಾಮ ಆಡಳಿತ ಅಧಿಕಾರಿಯ ಕಛೇರಿ

**ಝಳಕಿ :** ಸಮೀಪದ ಬಳ್ಳೊಳ್ಳಿ ಹೋಬಳಿಯ ಗ್ರಾಮ ಆಡಳಿತ ಆಧಿಕಾರಿಗಳಿಗೆ ಸರ್ಕಾರಿ ಕಛೇರಿ ಇಲ್ಲದೆ ಬಯಲಿನಲ್ಲಿ ಕುಳಿತು ಕಚೇರಿ ನಡೆಸುವಂತಹ ಪರಿಸ್ಥಿತಿ ಉಂಟಾಗಿದೆ ಎಂದು ಗ್ರಾಮದ ಯುವ ದುರೀಣರಾದ ವಿಲಾಸಗೌಡ ಪಾಟೀಲರು ಆರೋಪಿಸಿದ್ದಾರೆ.

ಬಳ್ಳೊಳ್ಳಿ ಗ್ರಾಮವು ಹಿಂದೆ ಮಿಸಲು ಮತಕ್ಷೇತ್ರ ಇವಾಗ ಬಳ್ಳೊಳ್ಳಿ ಹೋಬಳಿ ಇದ್ದು, ಈ ಹೋಬಳಿಗೆ ಸಂಬಂಧಿಸಿದಂತೆ ಸುಮಾರು 43 ಗ್ರಾಮಗಳು ಇಲ್ಲಿನ ನಾಡಕಛೇರಿಗೆ ಒಳಪಡುತ್ತವೆ, ಅದರಲಿ ಗ್ರಾಮ ಆಡಳಿತ ಅಧಿಕಾರಿಗಳು ಒಟ್ಟು 12 ಜನರಿದ್ದು, ಇದರಲ್ಲಿ ಬಳ್ಳೊಳ್ಳಿ ಸಂಬಂಧ ಪಟ್ಟಂತಹ ಗ್ರಾಮಾಡಳಿತ



ಅಧಿಕಾರಿಗಳಿಗೆ ತಮ್ಮ ದಿನಚರಿಯ ಕೇಲಸ ಮಾಡಲು ಸುಸಜ್ಜಿತವಾದ ಒಂದು ಸರ್ಕಾರಿ ಕೋಣೆ ಇಲ್ಲದೆ ಗ್ರಾಮದ ಮಂದಿರದಲ್ಲಿ, ಅಥವಾ ಎಲ್ಲಾದರು ಸ್ಥಳಾವಕಾಶ ಸಿಕ್ಕಲ್ಲಿ ತಮ್ಮಲ್ಲಿ ತಮ್ಮ ಕಾರ್ಯಮಾಡುವಂತಾಗಿದೆ. ಸುಮಾರು 27 ವರ್ಷಗಳ ಹಿಂದೆ ಗ್ರಾಮ ಆಡಳಿತ ಅಧಿಕಾರಿ ಕಛೇರಿ ಚಾವಡಿ ಕಟ್ಟೆ ಹತ್ತಿರ ಇದ್ದ ಸರ್ಕಾರಿ ಕಛೇರಿ ಸಂಪೂರ್ಣವಾಗಿ ನಾಶವಾಗಿದ್ದು, ಇಲಿಯವರೆಗು ಯಾವ ಅಧಿಕಾರಿಯಾಗಲಿ, ಗ್ರಾಮಸ್ಥರಾಗಲಿ ವಿಚಾರಿಸದಿರುವದು ತುಂಬಾ ವಿಶಾಧಕರ, ಸ್ಥಳಾವಕಾಶ ಇದ್ದರುಕೂಡಾ ಸರ್ಕಾರಿ ಕಛೆರಿ ನಿರ್ಮಾಣವಾಗಿಲ್ಲ, ಕಛೆರಿ ಇಲ್ಲದಿರುವದರಿಂದ ಸರಿಯಾಗಿ ಕಾರ್ಯ ನಡೆಸಲು ತುಂಬಾ ತೊಂದರೆಯಾಗುತ್ತದೆ, ಆದ್ದರಿಂದ ಜಿಲ್ಲಾಡಳಿತ ಮತ್ತು ತಾಲೂಕಾ ಅಧಿಕಾರಿಗಳು ಇದನ್ನು ಕೂಡಲೆ ಪರಿಶೀಲನೆ ನಡೆಸಬೇಕು, ಗ್ರಾಮ ಆಡಳಿತ ಅಧಿಕಾರಿಗಳ ಕಛೆರಿಗೆ ಸ್ಥಳಾವಕಾಶ ಇದ್ದು ಕೂಡಲೆ ದುರಸ್ಥಿ ಮಾಡುವಂತೆ ಆಗ್ರಹಿಸಿದ್ದಾರೆ.

# ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದಲ್ಲಿ "ಬಂಡವಾಳ ಹೂಡಿಕೆಯ ಜಾಗೃತಿ" ಕುರಿತು ಉಪನ್ಯಾಸ

## ಬಂಡವಾಳ ಹೂಡಿಕೆದಾರರಿಗೆ ಪ್ರೋತ್ಸಾಹ ಮಾರ್ಗದಶನದ ವಿಶೇಷ ವ್ಯವಸ್ಥೆಯನ್ನು ರಾಜ್ಯ ರೂಪಿಸಬೇಕು: ಶ್ರೀಕಾಂತ ಗುರುರಂಜನ್

**ಬಾಗಲಕೋಟೆ :** ಉದ್ದೇಶಿತ ಗುರಿ ತಲುಪಲು ಬಂಡವಾಳ ಹೂಡಿಕೆ ಮುಖ್ಯ, ಮಾನವ ಸಂಪನ್ಮೂಲ ಹಾಗೂ ಬಂಡವಾಳ ರಚನೆಯೊಂದಿಗೆ ನಿವ್ವಳ ಮತ್ತು ಸ್ಥಿರ ಬಂಡವಾಳ ನಿರ್ಮಾಣ ಸಾಧ್ಯವಾಗುವುದರಿಂದೆ ಬಂಡವಾಳ ಪ್ರೋತ್ಸಾಹ, ಸೂಕ್ತ ಮಾರ್ಗದರ್ಶನ ನೀಡವು ವಿಶೇಷ ವ್ಯವಸ್ಥೆಯನ್ನು ರಾಜ್ಯವು ರೂಪಿಸಬೇಕಾಗಿದೆ ಎಂದು ಮಥ ಎಕ್ಸಲೆನ್ಸ್ ಅಕಾಡೆಮಿಯ ಹಿರಿಯ ವೃತ್ತಿಪರ ತಜ್ಞರಾದ ಶ್ರೀಕಾಂತ ಗುರುರಂಜನ್ ಅವರು ಹೇಳಿದರು.



ಅವರು ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯ ಬಾಗಲಕೋಟೆ ಬಿ. ಬಿ.ಎ ವಿಭಾಗವು ಐ ಕ್ಯೂ ಎ ಸಿ ಅಡಿಯಲ್ಲಿ "ಬಂಡವಾಳ ಹೂಡಿಕೆಯ ಜಾಗೃತಿ" ಎಂಬ ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿರು.

ಬಂಡವಾಳವನ್ನು ಆಕರ್ಷಿಸಲು ಸರ್ಕಾರವು ವಿಶೇಷ ಆರ್ಥಿಕ ನೀತಿಗಳನ್ನು ಮತ್ತು ಪ್ರೋತ್ಸಾಹದಾಯಕ ಕೊಡುಗೆಗಳನ್ನು ನೀಡುತ್ತಿದೆ. ಅದರಲ್ಲೂ ವಿಶೇಷವಾಗಿ ಸಾಮಾಜಿಕ ಹಾಗೂ ಆರ್ಥಿಕ ಮೂಲಸೌಕರ್ಯಗಳಿಗೆ ಒತ್ತನ್ನು ನೀಡುವ ಬಂಡವಾಳ ಹೂಡಿಕೆಗಳಿಗೆ ವಿಶೇಷ ಸವಲತ್ತುಗಳನ್ನು ನೀಡುತ್ತದೆ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯ ಸರ್ಕಾರವು ಸಾಕಷ್ಟು ಬಂಡವಾಳವನ್ನು ಆಕರ್ಷಿಸಿದ್ದು, ದೇಶದ ರಫ್ತು ಮತ್ತು ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಲು ಸಾಕಷ್ಟು ಕೊಡುಗೆಯನ್ನು ನೀಡಿವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾತನಾಡಿದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ಜಗನ್ನಾಥ ವ್ಹಿ.ಚವ್ಹಾಣ ಅವರು ಬಂಡವಾಳ ಹೂಡಿಕೆಯ ಬಗ್ಗೆ ತಿಳಿಸಿದರು, ಬಿ.ಬಿ.ಎ ವಿಭಾಗದ ಸಂಯೋಜಕರಾದ ಡಾ.ಎಂ ನಂಜುಂಡಸ್ವಾಮಿ ಹಾಗೂ ಐ. ಕ್ಯೂ.ಎ.ಸಿ ಸಂಯೋಜಕರಾದ ಶ್ರೀಮತಿ ಗಿರಿಜಾ ಎಮ್. ನಾವದಗಿ ಉಪಸ್ತಿತರಿದ್ದರು .

ಸ್ವಾಗತ ಮತ್ತು ಪರಿಚಯ ಬಿಬಿಎ ವಿಭಾಗದ ಮುಖ್ಯಸ್ಥರಾದ ನಂದಿನಿ ದೊಡ್ಡಮನಿ ಸ್ವಾಗತಿಸಿ ಅತಿಥಿಗಳನ್ನು ಪರಿಚಯಿಸಿದರು.

ಕುಮಾರಿ ವೈಷ್ಣವಿ ಹಂದ್ರಾಳ ವಂದಿಸಿದರು, ಶೀತಲ್ ಬಾರ್ಶಿ ಕಾರ್ಯಕ್ರಮವನ್ನು ನಿರೂಪಿಸಿದರು. ಮಹಾವಿದ್ಯಾಲಯದ ಎಲ್ಲ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಸಂಹನ ಕೌಶಲ್ಯ ಬೆಳೆಸಿಕೊಳ್ಳಿ ವಿದ್ಯಾರ್ಥಿಗಳಿಗೆ ಸಿ ಯು ಬೆಳಕ್ಕಿ ಸಲಹೆ




**ಧಾರವಾಡ :** ಜೀವನದಲ್ಲಿ ಸಾಧನೆ ಮಾಡಬೇಕಾದರೆ ಮನೋಜ್ಞಾನ ಮತ್ತು ಸಂಹನ ಕೌಶಲ್ಯ ಅತಿ ಅಗತ್ಯವೆಂದು ಶ್ರೀ.ಸಿಯುಬೆಳ್ಳಕಿ ನಿವೃತ್ತನಿರ್ದೇಶಕರು, ಆಕಾಶವಾಣಿ ಧಾರವಾಡ,

ಇವರು ಅಂಜುಮನ್ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಹಿರಿಯ ನಾಗರಿಕರ ಜೊತೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಂತರ ಮಾತನಾಡಿದ ಸಿ.ಆರ್. ಪಾಟೀಲ್ ಖಣಜ ಸಹಾಯಕ ಆಯುಕ್ತರು, ವಾಣಿಜ್ಯ ತೆರಿಗೆ ಮೊದಲು ಅವಿಭಕ್ತ ಕುಟುಂಬಗಳು ಇದ್ದವು ಇದ-ರಿಂದ ಭಾವನಾತ್ಮಕ ಸಂಬಂಧಗಳು ಗಟ್ಟಿಯಾಗಿ-ತ್ತು ಎಂದರು. ಸ್ಪರ್ಧಾತ್ಮಕ ವಿಷಯಗಳಿಗೆ ಸೇರಿದಂತೆ ಬೇರೆ ವಿಷಯಗಳ ಭಾಷಾ ಭಂಡಾರವನ್ನು ಬೆಳೆಸಿಕೊಳ್ಳಬೇಕು ಎಂದು :ಡಾ ಮಾಜನ್ ಮುಲ್ಲಾ. ಖಣಜ ಜರ್ಮನ್ ಭಾಷೆ ಪ್ರೊಫೆಸರ್, ಕೆಯುಡಿ ಹೇಳಿದರು ಹಾಗೂ ನಿವೃತ್ತ ಪ್ರಾಚಾರ್ಯ ಡಾ ಜುಬೇದಾ ಮುಲ್ಲಾ, ಒಟ್ಟಾಗಿ ಆಧುನಿಕ ತಂತ್ರಜ್ಞಾನ ಯುಗದಲ್ಲಿ ಭಾವನಾತ್ಮಕ ಸಂಬಂಧಗಳು ಕಳೆದುಕೊಳ್ಳುತ್ತಿವೆ ಎಂದು ಹಿರಿಯ ನಾಗರಿಕರ ಮೂಲಕ ಈ ಕಾರ್ಯಕ್ರಮ ಆಯೋಜಿಸುತ್ತಿಲ್ಲ. ಕಾರ್ಯಕ್ರಮದ ಮುಖ್ಯ ಉದ್ದೇಶ ವಿದ್ಯಾರ್ಥಿಗಳು ಹಿರಿಯ ರವರ ಜೊತೆ ಸಮಯ ಕಳೆಯಬೇಕು ಎಂದು ಪ್ರಚಾರ ಮಕಾಂದಾರ್ ತಿಳಿಸಿದರು.

ಕಾರ್ಯಕ್ರಮದಲ್ಲಿ

ಪತ್ರಿಕೋದ್ಯಮದ ಮುಖ್ಯಸ್ಥ ಡಾ. ಎಸ್ ಎಸ್ ಅದೋನಿ, ಸಮಾಜಶಾಸ್ತ್ರದ ಮುಖ್ಯಸ್ಥೆ ಸಮೀನಾ ನದಾಫ್, ಮಂಗಲಾ ತಳವಾರ,

ಡಾ ಆಸ್ಮಾ ಬಳ್ಳಾರಿ, ಡಾ ನಾಗರಾಜ್ ಗುದಗನವರ, ಡಾ ಐ ಎ ಮುಲ್ಲಾ ಮತ್ತು ಶಿಕ್ಷಕ, ಶಿಕ್ಷಕೇತರ್ ಸಿಬ್ಬಂದಿ ಭಾಗವಹಿಸಿದ್ದರು. ಕಾರ್ಯಕ್ರಮವೊ ಕುಮಾರ ಉಸ್ಮಾನ್ ಅತ್ತಾರ ರವರು ಕುರಾನ್ ಪಟಿಸಿದರು, ಕುಮಾರ್ ಪ್ರವೀಣ್ ಲಮಾಣಿ ಶ್ಲೋಕ ಹೇಳಿದರು, ಕುಮಾರಿ ಬಿಬಿ ಬತುಲ್ ಶೇಖ್ ವಂದಿಸಿದರು ಹಾಗೂ ವಿಜಯ ಲಕ್ಷ್ಮಿ ಕುಮ್ಮೂರ ನಿರೂಪಿಸಿದರು ಮಾಡಿದರೆ ಡಾ ಗುದಗನವರ ಹಾಗೂ ಡಾ ನಾಲತವಾಡ ಸಂವಾದ ಕಾರ್ಯಕ್ರಮ ನೆಡಿಸಿಕೋಟ್ಟರು.

ಕಾರ್ಯಕ್ರಮದಲ್ಲಿ ಇತ್ತೀಚೆಗೆ ನಿಧನ ಹೊಂದಿದ ಐಪಿಎಸ್ ಅಧಿಕಾರಿ ಹಾಗೂ ಉರ್ದು ಕವಿ ಖಲೀಲ್ ಮಾಮೂನ್ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

## ವಿಕ್ರಮ ಕಮದಾಳ ನಿಧನ



**ಮೂಡಲಗಿ** : ಇಲ್ಲಿಯ ವಿದ್ಯಾನಗರದ ನಿವೃತ್ತ ಪ್ರಾಚಾರ್ಯ ಪ್ರೊ. ಎಸ್. ಎಂ.ಕಮದಾಳ ಅವರ ಪುತ್ರ ವಿಕ್ರಮ ಸುಭಾಷ ಕಮದಾಳ (32) ಸೋಮವಾರ ರಾತ್ರಿ ನಿಧನರಾದರು. ಮಂಗಳವಾರ ಮಧ್ಯಾಹ್ನ ಅಂತ್ಯಕ್ರಿಯೆ ಜರುಗಿತು.

ಅವರು ತಂದೆ, ತಾಯಿ, ಪತ್ನಿ, ಸಹೋದರಿ ಹಾಗೂ ಅಪಾರ ಬಂಧು, ಬಳಗವನ್ನು ಅಗಲಿದ್ದಾರೆ.

## ಶಾಂತಾಯಿ ವೃದ್ದಾಶ್ರಮದಲ್ಲಿ ಯೋಗ ದಿನಾಚರಣೆ

**ಬೆಳಗಾವಿ :** ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಜಿಲ್ಲೆಯ ಆಯುಷ್ಯ ಇಲಾಖೆಯ ಜಿಲ್ಲಾ ವೈದ್ಯಾಧಿಕಾರಿಗಳಾದ ಡಾ. ಶ್ರೀಕಾಂತ. ಬಿ. ಸುಣದೋಳಿ ಅವರ ಮಾರ್ಗದರ್ಶನದಲ್ಲಿ ಬೆಳಗಾವಿ ನಗರದ ಜೈನ್ ಹೆರಿಟೇಜ್ ಶಾಲೆಯ ಸ್ಕೌಟ್ ಮತ್ತು ಗೈಡ್ಸ್ ಮಕ್ಕಳು ಶಾಂತಾಯಿ ವೃದ್ದಾಶ್ರಮಕ್ಕೆ ಭೇಟಿ ನೀಡಿ ವೃದ್ದಾಶ್ರಮದಲ್ಲಿರುವ ವಯೋವೃದ್ಧರಿಗೆ ವಿವಿಧ ಯೋಗಾಸನಗಳನ್ನು ಹೇಳಿಕೊಟ್ಟರು.

ಕ್ಲಬ್ ಮಾಸ್ಟರ್ ಪಲ್ಲವಿ ನಾಡಕರ್ಣಿ ಹಾಗೂ ಫ್ಲಾಕ್ ಲೀಡರ್ ಕಲ್ಪನಾ ಅವರು ಸದರಿ ಕಾರ್ಯಕ್ರಮವನ್ನು ಆಯೋಜಿಸಿದರು.

# ಪ್ರಗತಿ ಪರಿಶೀಲನಾ ಸಭೆ

## ಅಭಿವೃದ್ಧಿ ಕಾಮಗಾರಿಗಳು ಲ್ಯಾಪ್ಸ್ ಆದಲ್ಲಿ ಅಧಿಕಾರಿಗಳೇ ಹೊಣೆ: ಸಚಿವ ಲಾಡ್

**ಧಾರವಾಡ:** ಸರಕಾರದಿಂದ ಜಿಲ್ಲೆಯ ವಿವಿಧ ಅಭಿವೃದ್ಧಿ ಕಾಮಗಾರಿ, ಯೋಜನೆಗಳಿಗೆ ಬಿಡುಗಡೆ ಆಗುವ ಅನುದಾನವನ್ನು ಸಕಾಲದಲ್ಲಿ ಬಳಸದೇ, ಅದು ಲ್ಯಾಪ್ಸ್ ಆದರೇ ಸಂಬಂಧಿಸಿದ ಅಧಿಕಾರಿಯನ್ನು ಹೊಣೆಗಾರರನ್ನಾಗಿಸಿ, ಅವರಿಂದಲೇ ಅದನ್ನು ವಸೂಲು ಮಾಡಲು ಸರ್ಕಾರ-ಕ್ಕೆ ಶಿಪಾರಸ್ಸು ಮಾಡಲಾಗುತ್ತದೆ ಎಂದು ಕಾರ್ಮಿಕ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರು ಅಧಿಕಾರಿಗಳಿಗೆ ಎಚ್ಚರಿಸಿದರು.



ಧಾರವಾಡ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ 2024 ನೇ ಸಾಲಿನ ಮಾರ್ಚ ಅಂತ್ಯಕ್ಕೆ ಕೊನೆಗೊಂಡಂತೆ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಕೆಡಿಪಿ ಸಭೆ ಜರುಗಿಸಿ, ಮಾತನಾಡಿದರು.

ಇಲಾಖೆಗಳಿಗೆ ಬಿಡುಗಡೆ ಆಗಿರುವ ಅನುದಾನ ಪೂರ್ಣ ಬಳಕೆ ಆಗಬೇಕು. ನಿಧಾನಗತಿ ಅಥವಾ ಬಳಕೆಯಲ್ಲಿ ನಿರ್ಲಕ್ಷ್ಯವಹಿಸಿದರೆ ಸಲ್ಲದು. ಕ್ರಿಯಾಯೋಜನೆ ರೂಪಿಸಿ, ಗುರಿ ನಿಗದಿಗೊಳಿಸುವಾಗ ಆರ್ಥಿಕ ಗುರಿಯನ್ನು ಗುರುತಿಸಬೇಕು. ಅದರ ಪ್ರಕಾರ ಪ್ರಗತಿ ಸಾಧಿಸಬೇಕೆಂದು ಸಚಿವರು ಹೇಳಿದರು.

ಜಿಲ್ಲೆಯಲ್ಲಿ ಕೃಷಿ ಚಟುವಟಿಕೆಗಳು ಉತ್ತಮವಾಗಿ ಸಾಗುತ್ತಿವೆ. ಮೇ ತಿಂಗಳಲ್ಲಿ ಶೇ 20 ರಷ್ಟು ಹೆಚ್ಚುವರಿ ಮಳೆ ಆಗಿದ್ದ-ರೆ, ಜೂನ್ ತಿಂಗಳಲ್ಲಿ ಅದು ಶೇ. 15 ರಿಂದ 20 ರಷ್ಟು ಕಡಿಮೆ ಆಗಿದೆ. ಜುಲೈ ತಿಂಗಳಲ್ಲಿ ಹೆಚ್ಚು ಮಳೆ ಆಗುವ ಸಾಧ್ಯತೆ ಇದೆ ಎಂದರು.

ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ ಸುಮಾರು 92 ಸಾವಿರ ಹೆಕ್ಟೆರ್ ಪ್ರದೇಶದಲ್ಲಿ ಹೆಸರು ಬಿತ್ತನೆ ಆಗಿದೆ. ಸೋಯಾ, ಹತ್ತಿ, ಶೇಂಗಾ, ಉದ್ದು ಸೇರಿದಂತೆ ಶೇ 90 ರಷ್ಟು ಪ್ರದೇಶ ಈಗಾಗಲೇ ಬಿತ್ತನೆ ಆಗಿದೆ ಕುಡಿಯುವ ನೀರು ಸರಬರಾಜು ಅಗತ್ಯವಿರುವ ಗ್ರಾಮಗಳಲ್ಲಿ ಮುಂದುವರಿಸಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಥವಾ ಗ್ರಾಮ ಪಂಚಾಯತಿಗಳಿಂದ ಅನುದಾನ ಪೂರೈಸಲು ಕ್ರಮ ವಹಿಸಲಾಗುವುದು ಎಂದು ಸಚಿವರು ತಿಳಿಸಿದರು.

ಕಾಮಗಾರಿ ಕಳಪೆ, ವಿಳಂಬ ಮಾಡಿದರೆ ಕಪ್ಪು ಪಟ್ಟಿಗೆ ಸೇರಿಸಿ:: ಜಿಲ್ಲೆಯಲ್ಲಿ ಅನುಷ್ಠಾನದಲ್ಲಿರುವ ಜೆ.ಜೆ.ಎಂ. ಸೇರಿದಂತೆ ಯಾವುದೇ ಕಾಮಗಾರಿ ಅನುಷ್ಠಾನದಲ್ಲಿ ನಿಧಾನಗತಿ, ನಿರ್ಲಕ್ಷ್ಯ, ಕಳಪೆ ಗುಣಮಟ್ಟ ಮಾಡಿದರೆ ಅವರು ಡಿಪಾಜಿಟ್ ಮುಟ್ಟುಗೋಲು ಹಾಕಿಕೊಂಡು ಬ್ಲ್ಯಾಕ್ ಲಿಸ್ಟ್‌ಗೆ ಸೇರಿಸಲು ಕ್ರಮವಹಿಸಿ. ಇಲಾಖೆ ಹಂತದಲ್ಲಿ ಆಗದಿದ್ದರೆ ನನಗೆ ಶಿಪಾರಸ್ಸು ಮಾಡಿ ನಾನೆ ಸರಕಾರದಿಂದ ಅಂತಹ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ಕ್ರಮ ವಹಿಸುತ್ತೇನೆ ಎಂದರು.

ಸಭೆಯಲ್ಲಿ ಶಾಸಕರಾದ ಎನ್.ಎಚ್. ಕೋನರಡ್ಡಿ, ಮಹೇಶ ಟೆಂಗಿನಕಾಯಿ, ಎಂ.ಆರ್.ಪಾಟೀಲ ಅವರು ವಿವಿಧ ವಿಷಯಗಳ ಕುರಿತು ಚರ್ಚಿಸಿದರು.

ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಮಾತನಾಡಿದರು. ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ವರೂಪ ಟಿ.ಕೆ., ಅವರು ಸ್ವಾಗತಿಸಿ, ಸಭೆಯಲ್ಲಿ ಮಾತನಾಡಿದರು. ಜಿಲ್ಲಾ ಪಂಚಾಯತ ಮುಖ್ಯ ಯೋಜನಾಧಿಕಾರಿ ದೀಪಕ ಮಡಿವಾಳರ ಸಭೆ ನಿರ್ವಹಿಸಿದರು. ವೇದಿಕೆಯಲ್ಲಿ ಮಹಾನಗರ ಪೊಲೀಸ್ ಆಯುಕ್ತೆ ರೇಣುಕಾ ಸುಕುಮಾರ, ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ.ಗೋಪಾಲ ಬ್ಯಾ-ಕೋಡ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಆಯುಕ್ತ ಡಾ.ಈಶ್ವರ ಉಳ್ಳಾಗಡ್ಡಿ ಇದ್ದರು.

ಸಭೆಯಲ್ಲಿ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಭಾಗವಹಿಸಿ, ಪ್ರಗತಿ ವರದಿ ಮಂಡಿಸಿದರು.

# ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಎಬಿವಿಪಿ ಪ್ರತಿಭಟನೆ

**ಹುಬ್ಬಳ್ಳಿ :** ವಿದ್ಯಾರ್ಥಿಗಳ ಶೈಕ್ಷಣಿಕ ವೇಳಾಪಟ್ಟಿಗೆ ಅನುಗುಣವಾಗಿ ಬಸ್‌ಪಾಸ್ ವಿತರಣೆ ಮಾಡಬೇಕು. ಅವಶ್ಯಕವಿರುವ ವಿದ್ಯಾರ್ಥಿಗಳ ಬಸ್‌ಪಾಸ್ ಅವಧಿ ವಿಸ್ತರಿಸಬೇಕು ಹಾಗೂ ಬಸ್‌ಗಳ ಸಂಖ್ಯೆಯನ್ನು ಹೆಚ್ಚಳ ಮಾಡುವಂತೆ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನಿಂದ ಪ್ರತಿಭಟನೆ ನಡೆಸಲಾಯಿತು.



ರಾಜ್ಯದಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಪಡೆಯಲು ನಗರ ಪ್ರದೇಶಗಳ ಶಾಲಾ ಕಾಲೇಜುಗಳಿಗೆ ಬರುತ್ತಾರೆ. ವಿದ್ಯಾರ್ಥಿಗಳ ತರಗತಿಗಳು ಪ್ರಾರಂಭವಾದ ನಂತರ ಸರಿಯಾದ ಸಮಯಕ್ಕೆ ಬಸ್‌ಪಾಸ್ ಅನ್ನು ವಿತರಣೆ ಮಾಡದೇ ಇರುವ ಕಾರಣ ಪ್ರತಿದಿನ ನೂರಾರು ರೂಪಾಯಿಗಳನ್ನು ಹಣ ಖರ್ಚು ಮಾಡಿಕೊಂಡು ಬಡ ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳಿಗೆ ಬರುವುದು ಕಷ್ಟದ ಸಂಗತಿ ಆಗಿದೆ. ಸರ್ಕಾರ ಶಾಲಾ ಕಾಲೇಜುಗಳು ಪ್ರಾರಂಭವಾದ ತಕ್ಷಣವೇ ವಿದ್ಯಾರ್ಥಿಗಳಿಗೆ ಬಸ್‌ಪಾಸ್ ಅನ್ನು ಸಕಾಲದಲ್ಲಿ ಒದಗಿಸುವ ಅವಶ್ಯಕತೆ ಇದೆ.

ಅರ್ಜಿ ಸಲ್ಲಿಸಿದ ನಂತರ ವಾರಗಳ ಕಾಲ ವಿದ್ಯಾರ್ಥಿಗಳು ಬಸ್‌ಪಾಸ್ ಅನ್ನು ಪಡೆಯಲು ಕಾಯುವ ಸ್ಥಿತಿ ಇದೆ. ಇದ-ರಿಂದ ಬಸ್ ಪಾಸ್ ಸಿಗುವವರೆಗೂ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಶೈಕ್ಷಣಿಕ ವೇಳಾಪಟ್ಟಿಗೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಬಸ್‌ಪಾಸ್ ಅನ್ನು ವಿತರಿಸುವಂತೆ ಆಗ್ರಹಿಸಿದರು.

ಬಸ್‌ಗಳ ಸಂಖ್ಯೆಯನ್ನು ಹೆಚ್ಚಳ ಮಾಡದೆ ಇರುವುದರಿಂದ ವಿದ್ಯಾರ್ಥಿಗಳಿಗೆ ಬಸ್‌ಗಳಲ್ಲಿ ಓಡಾಡಲು ಕಷ್ಟವಾಗುತ್ತಿದೆ. ಬಸ್‌ಗಳ ಸಂಖ್ಯೆಯನ್ನು ಹೆಚ್ಚಳ ಮಾಡಬೇಕು.

ಯಾವ ಹಳ್ಳಿಗಳಿಗೆ ಬಸ್‌ಗಳ ಕೊರತೆ ಇದೆ ಆ ಹಳ್ಳಿಗಳಿಗೆ ಸಮರ್ಪಕವಾದ ಬಸ್‌ಗಳ ವ್ಯವಸ್ಥೆಯನ್ನು ಶಾಲಾ-ಕಾಲೇಜುಗಳ ಸಮಯಕ್ಕೆ ಒದಗಿಸಬೇಕೆಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಸರ್ಕಾರಕ್ಕೆ ಆಗ್ರಹಿಸಿತು.

# ಸಿಎಂ, ಡಿಸಿಎಂ ತಿಗಣೆಯಂತೆ ಬಡವರ ರಕ್ತ ಹೀರುತ್ತಿದ್ದಾರೆ: ಆರ್.ಅಶೋಕ್ ವಾಗ್ದಾಳಿ

**ಬೆಳಗಾವಿ :** ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಬಡವರ ರಕ್ತವನ್ನು ತಿಗಣೆ-ಯ ರೀತಿಯಲ್ಲಿ ಹೀರುತ್ತಿದ್ದಾರೆ ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಟೀಕಿಸಿದರು.

ಬೆಳಗಾವಿಯಲ್ಲಿ ಇಂದು ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ಲೋಕಸಭಾ ಚುನಾವಣೆಯ ಸೋಲಿನ ಕೋಪಕ್ಕೆ ರಾಜ್ಯದಲ್ಲಿ ಬೆಲೆ ಏರಿಕೆ ಪರ್ವ ಶುರುವಾಗಿದೆ. ಸಿಮೆಂಟ್, ಕಬ್ಬಿಣ ಸೇರಿ ಎಲ್ಲ ವಸ್ತುಗಳ ಬೆಲೆ ಏರಿಸಲಾಗಿದೆ. ಇದೀಗ ಹಾಲಿನ ಬೆಲೆ ಲೀಟರ್‌ಗೆ 2 ರೂ. ಹೆಚ್ಚಿಸಿದ್ದಾರೆ. ಕಳೆದ ವರ್ಷ ಮೂರು ರೂಪಾಯಿ ಜಾಸ್ತಿ ಮಾಡಿದ್ದರು ಎಂದರು.

ಈ ಸರ್ಕಾರ ಬಹಳ ದಿನ ಉಳಿಯಲ್ಲ. ನಾಲ್ಕು ರಾಜ್ಯಗಳ ಚುನಾವಣೆಗೆ ಕಪ್ಪ ಕಾಣಿ-ಕೆ ಕೊಡಲು ಬೆಲೆ ಏರಿಕೆ ಮಾಡಿದ್ದಾರೆ.

ಈ ರೀತಿ ಲೂಟಿ ಹೊಡೆಯುವ ಲೂಟಿಕೋರ ತಂಡ-ಕ್ಕೆ ಮುಂಬರುವ ಜಿ.ಪಂ, ಬೆಂಗಳೂರು ಪಾಲಿಕೆ ಚುನಾವಣೆಯಲ್ಲಿ ಜನ ತಕ್ಕಪಾಠ ಕಲಿಸಲಿದ್ದಾರೆ ಎಂದು ಹೇಳಿದರು.

ಪೆಟ್ರೋಲ್ ಬೆಲೆ ಏರಿಕೆ ಖಂಡಿಸಿ ವಿಧಾನಸೌಧದಿಂದ ಸಿಎಂ ಮನೆಗೆ ಮುತ್ತಿಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಸಿಎಂ ಮನೆಯಿಂದ ಹೊರಬರದಂತೆ ದಿಗ್ಬಂಧನ ಹಾಕುತ್ತೇವೆ. ಜುಲೈ 3 ಅಥವಾ 4ರಂದು ಮುತ್ತಿಗೆ ಕಾರ್ಯಕ್ರಮ ನಡೆಯಲಿದೆ ಎಂದರು.

ಇದೇ ಸಂದರ್ಭದಲ್ಲಿ ಪ್ರಜ್ವಲ್ ರೇವಣ್ಣ ಪ್ರಕರಣ ವೈಯಕ್ತಿಕ ವಿಚಾರ ಎಂದರು. ಬಳಿಕ ಮತ್ತೆ ರಾಜ್ಯ ಸರ್ಕಾರದ ವಿರುದ್ಧ ಟೀಕಾಸಮರ ಮುಂದುವರೆಸಿ, ಎಸ್ಸಿಗಳಿಗೆ ಮೀಸಲಿಟ್ಟ 187 ಕೋಟಿ ಹಣವನ್ನು ಲೂಟಿ ಮಾಡಿದ್ದಾರೆ.

ಈ ಬಗ್ಗೆ ಏನೂ ಹೇಳುತ್ತೀರಿ ಎಂದು ಪ್ರಶ್ನಿಸಿದರು.

# ನಕಲಿ ಕ್ಲಿನಿಕ್ ಸೀಜ್: ಚಿಕ್ಕೋಡಿಯಲ್ಲಿ ನಕಲಿ ವೈದ್ಯನಿಗೆ 1 ವಾರ ಜೈಲು, 1 ಲಕ್ಷ ರೂ. ದಂಡ

**ಬೆಳಗಾವಿ :** ಜಿಲ್ಲೆಯಲ್ಲಿ ಮಕ್ಕಳ ಮಾರಾಟ ಪ್ರಕರಣದ ಬಳಿಕ ಆರೋಗ್ಯ ಇಲಾಖೆ ಫುಲ್ ಅಲರ್ಟ್ ಆಗಿದ್ದು, ನಕಲಿ ವೈದ್ಯರು ಮತ್ತು ನಕಲಿ ಕ್ಲಿನಿಕ್‌ಗಳ ವಿರುದ್ಧ ಕಾರ್ಯಚರಣೆ ಕೈಗೊಂಡಿದೆ. ಡಿಎಚ್‌ಓ ಡಾ.ಮಹೇಶ್ ಕೋಣಿ ನೇತೃತ್ವದಲ್ಲಿ ನಕಲಿ ವೈದ್ಯನ ಕ್ಲಿನಿಕ್‌ಗೆ ಬೀಗ ಜಡಿಯಲಾಗಿದೆ.



ನಗರದ ಬಡಕಲ್ ಗಲ್ಲಿಯಲ್ಲಿರುವ ನಕಲಿ ವೈದ್ಯನ ಶಿವಾ ಹೆಸರಿನ ಕ್ಲಿನಿಕ್‌ಗೆ ಬೀಗ ಹಾಕಲಾಗಿದೆ. ಕ್ಲಿನಿಕ್ ಒಳಗಡೆ ಇಸಿಜಿ ಸೇರಿದಂತೆ ಆಯುರ್ವೇದ ಮೆಡಿಸಿನ್ ಪೂರೈಸಲಾಗುತ್ತಿತ್ತು. ಆರೋಗ್ಯ ಇಲಾಖೆ ಅಧಿಕಾರಿಗಳು ಸಂಪೂರ್ಣವಾಗಿ ಕ್ಲಿನಿಕ್‌ನ್ನು ಜಾಲಾಡಿ ಮಾತ್ರೆ, ಔಷಧ, ಯಂತ್ರೋಪಕರಣಗಳಪಟ್ಟಿಮಾಡಿಕೊಂಡು ನಕಲಿವೈದ್ಯನಿಗೆನೋಟಿಸ್‌ನೀಡಿಆಸ್ಪತ್ರೆಯನ್ನು ಸೀಜ್‌ಮಾಡಿದ್ದಾರೆ.ಜಿಲ್ಲಾಆರೋಗ್ಯಾಧಿಕಾರಿ ಡಾ. ಮಹೇಶ ಕೋಣಿ ಮಾತನಾಡಿ, 'ದಶಕಗಳಿಂದಲೂ ಇದೇ ಕಟ್ಟಡದಲ್ಲಿ ಅನಧಿಕೃತವಾಗಿ ಕ್ಲಿನಿಕ್ ನಡೆಸಲಾಗುತ್ತಿತ್ತು. ಇದರ ಪಕ್ಕದಲ್ಲೇ ಇದೇ ವ್ಯಕ್ತಿಗೆ ಸೇರಿದ ಇನ್ನೊಂದು ದೊಡ್ಡ ಆಸ್ಪತ್ರೆ ಕೂಡ ಇದೆ. ಅದೂ ಅನಧಿಕೃತ ಆಗಿರುವ ಸಂಶಯವಿದ್ದು, ನೋಟಿಸ್ ನೀಡಿ ಪರಿಶೀಲಿಸಲಾಗುವುದು. ಈಗ ಸೀಜ್ ಮಾಡಿರುವ ಕ್ಲಿನಿಕ್ ತೆರೆಯಲು ನಿಯಮಾನುಸಾರ ಅನುಮತಿ ಪಡೆದಿಲ್ಲ. ರೋಗಿಗಳ ಚಿಕಿತ್ಸೆಗೆ ಸೂಕ್ತ ಸೌಕರ್ಯಗಳಿಲ್ಲ, ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಮಾಣಪತ್ರಗಳೂ ಇಲ್ಲ. ಪ್ರಮುಖವಾಗಿ ಕ್ಲಿನಿಕ್‌ನಲ್ಲಿ ನೇಮಕಗೊಂಡ ಸಿಬ್ಬಂದಿ ಕೂಡ ವೈದ್ಯಕೀಯಕ್ಕೆ ಸಂಬಂಧಿಸಿದ ಯಾವುದೇ ಶಿಕ್ಷಣ ಪಡೆದಿಲ್ಲ' ಎಂದು ತಿಳಿಸಿದರು.

ಅಲ್ಲದೇ,ದಾಳಿವೇಳೆಕ್ಲಿನಿಕ್‌ನಲ್ಲಿರೋಗಿಗಳನ್ನು ದಾಖಲು ಮಾಡಿಕೊಳ್ಳಲಾಗಿತ್ತು. ಕೂದಲು ಉದುರುವುದು,ನರದೌರ್ಬಲ್ಯ,ಸೌಂದರ್ಯ ವೃದ್ಧಿ ಸೇರಿದಂತೆ ಹಲವು ಸಮಸ್ಯೆಗಳಿಗೆ ಉಪಚಾರ ಮಾಡಿದ ದಾಖಲೆಗಳು ಸಿಕ್ಕಿವೆ. ವಿವಿಧ ರೀತಿಯ ಔಷಧಿ, ಮಾತ್ರೆ, ಪೌಡರ್‌ಗಳನ್ನೂ ಇವರು ರೋಗಿಗಳಿಗೆ ನೀಡಿದ್ದಾರೆ. ಇದಷ್ಟೇ ಅಲ್ಲದೇ ಇಡೀ ಜಿಲ್ಲೆಯಾದ್ಯಂತ ನಕಲಿ ಕ್ಲಿನಿಕ್‌ಗಳ ವಿರುದ್ಧ ನಿರ್ದಾಕ್ಷಿಣ್ಯಕ್ರಮಕೈಗೊಳ್ಳಲಾಗುತ್ತದೆಎಂದು ಡಾ. ಮಹೇಶ ಕೋಣಿ ಮಾಹಿತಿ ನೀಡಿದ್ದಾರೆ.

ದಾಳಿಯಲ್ಲಿ ಉಪವಿಭಾಗಾಧಿಕಾರಿ ಬಸವಣ್ಣೆಪ್ಪ ಕಲಶೆಟ್ಟಿ, ಬೆಳಗಾವಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಸಂಜಯ ಡುಮ್ಮಗೋಳ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಶ್ರೀಕಾಂತ ಸುಣಧೋಳಿ, ನೋಡಲ್ ಅಧಿಕಾರಿ ಡಾ.ವಿಶ್ವನಾಥ ಭೋವಿ, ತಹಶೀಲ್ದಾರ್ ಸಿದ್ರಾಯ ಬೋಸಗಿ, ಹಾಗೂ ಪೊಲೀಸರು ಭಾಗಿಯಾಗಿದ್ದರು.

ನಕಲಿ ವೈದ್ಯನಿಗೆ ಒಂದು ವಾರ ಜೈಲು ಶಿಕ್ಷೆ: ಅತ್ತ ಚಿಕ್ಕೋಡಿ ತಾಲೂಕಿನ ಕೆರೂರಿನ ನಕಲಿ ವೈದ್ಯನಿಗೆ ಒಂದು ವಾರ ಜೈಲು ಶಿಕ್ಷೆ ಮತ್ತು 1 ಲಕ್ಷ ರೂ. ದಂಡ ವಿಧಿಸಿ ಜಿಲ್ಲಾ ಕೆಪಿಎಂಇ ನೋಂದಣಿ ಮತ್ತು ಕುಂದು-ಕೊರತೆ ಪರಿಹಾರ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಮಂಗಳವಾರ ಆದೇಶ ಹೊರಡಿಸಿದ್ದಾರೆ.

ರಿಯಾಜ್ ಮುಲ್ಲಾ ಶಿಕ್ಷೆಗೆ ಗುರಿಯಾದ ನಕಲಿ ವೈದ್ಯ.ಚಿಕ್ಕೋಡಿತಾಲೂಕುಆರೋಗ್ಯಾಧಿಕಾರಿ ಮಾರ್ಚ್ 23ರಂದು ಈ ಕ್ಲಿನಿಕ್ ಮೇಲೆ ದಾಳಿ ನಡೆಸಿದ್ದರು. ಆಲೋಪಥಿ ಔಷಧ ವಶಕ್ಕೆ ಪಡೆದಿದ್ದರು. ರಿಯಾಜ್ ವೈದ್ಯಕೀಯ ಪದವಿ ಮತ್ತು ಕೆಪಿಎಂಇ ನೋಂದಣಿ ಇಲ್ಲದೇ ಚಿಕಿತ್ಸೆ ನೀಡುತ್ತಿದ್ದರು ಎಂದು ಜಿಲ್ಲಾ ಕೆಪಿಎಂಇ ನೋಂದಣಿಮತ್ತುಕುಂದುಕೊರತೆಪರಿಹಾರ ಪ್ರಾಧಿಕಾರಕ್ಕೆ ಮಾರ್ಚ್ 25ರಂದು ವರದಿ ಸಲ್ಲಿಸಿದ್ದರು.

ಪ್ರಾಧಿಕಾರ ಸಮಿತಿ ವಿಚಾರಣೆ ನಡೆಸಿದಾಗ, ಆರೋಪಿ ತಪ್ಪೊಪ್ಪಿಕೊಂಡಿದ್ದರು. ಹಾಗಾಗಿ, ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿ ಕಾಯ್ದೆ 2007, 2009, ಕಾಯ್ದೆಯ ತಿದ್ದುಪಡಿ ಅಧಿಸೂಚನೆ 2018ರ ನಿಯಮ 19 ಉಪನಿಯಮ 1ರ ತಿದ್ದುಪಡಿ ಅಧಿಸೂಚನೆ,2018ರಅಧಿನಿಯಮ17ಸೆಕ್ಷನ್ 19ರ ಉಪನಿಯಮದಂತೆ ಜಿಲ್ಲಾಧಿಕಾರಿಗಳು ಶಿಕ್ಷೆ ವಿಧಿಸಿ, ಆದೇಶ ಹೊರಡಿಸಿದ್ದಾರೆ.

# ಕಸಾಪ ವತಿಯಿಂದ ಡಾ. ಕಮಲಾ ಹಂಪನಾರವರಿಗೆ ನುಡಿನಮನ



**ಇಂಡಿ :** ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ ಇಂಡಿ ವತಿಯಿಂದ ನಾಡಿನ ಹಿರಿಯ ಸಾಹಿತಿ ನಾಡೋಜ ಡಾ.ಕಮಲಾ ಹಂಪನಾರವರಿಗೆ ಕ.ಸಾ.ಪ ಕಛೇರಿಯಲ್ಲಿ ಜರುಗಿದ ಶ್ರದ್ಧಾಂಜಲಿ ಸಭೆಯಲ್ಲಿ ನುಡಿನಮನ ಸಲ್ಲಿಸಲಾಯಿತು.

ನುಡಿನಮನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಾಹಿತಿ ಡಿ.ಎನ್.ಅಕ್ಕಿಯವರು ಹಂಪನಾರವರ ಕುರಿತು ಮಾತನಾಡಿ ಹಂಪನಾ ದಂಪತಿಗಳ ಜೊತೆಗಿನ ಸಾಹಿತಿಕ ಒಡನಾಟವನ್ನು ಮೇಲಕು ಹಾಕಿದರು. ಸಾಹಿತಿ ಆರ್.ವ್ಹಿ.ಪಾಟೀಲ ಕ.ಸಾ.ಪ ಕಾರ್ಯದರ್ಶಿ, ಶ್ರೀಮತಿ. ಪಾರ್ವತಿ ಸೊನ್ನದರವರು ನುಡಿನಮನ ಸಲ್ಲಿಸಿದರು.

ಕ.ಸಾ.ಪ ತಾಲೂಕು ಅಧ್ಯಕ್ಷ ರಾಘವೇಂದ್ರ ಕುಲಕರ್ಣಿ ಮಾತನಾಡಿ ಡಾ.ಕಮಲಾ ಹಂಪನಾರವರು ಅವರ ಪತಿಯಾದ ಡಾ.ಹಂಪನಾರವರಿಗೆ ಅನುಕೂಲ ಸತಿಯಾಗಿದ್ದು. ಹಾಗೆಯೇ ಡಾ.ಹಂಪನಾರವರು ತಮ್ಮ ಸತಿಗೆ ಅನುಕೂಲ ಪತಿಯಾಗಿದ್ದರು. ಈರ್ವರ ಸಾಹಿತಿಕ ಜೋಡಿ ಸಾಹಿತ್ಯ ವಲಯದಲ್ಲಿ "ಜಕ್ಕವಕ್ಕಿ"ಗಳ ಹಾಗೆ ಇದ್ದರು. ಇವರ ಅಗಲಿಕೆ ಕನ್ನಡ ಸಾಹಿತ್ಯ ವಲಯಕ್ಕೆ ಅಪಾರ ನಷ್ಟವನ್ನುಂಟು ಮಾಡಿದೆಯೆಂದು ನುಡಿ-ನಮನ ಸಲ್ಲಿಸಿದರು.

ಸಭೆಯಲ್ಲಿ ಕ.ಸಾ.ಪ ಕಾರ್ಯದರ್ಶಿ ಅಹ್ಮದ ವಾಲಿಕಾರ, ಕೆ.ಎನ್.ಬಿರಾದಾರ, ಶ್ರೀಮತಿ.ಜಯಶ್ರೀ ತೆಲಗ, ಶ್ರೀಮತಿ.ಗೀತಾ ಹಿರೇಮಾಳ, ಪವನ ಗಜಾಕೋಶ ಭಾಗವಹಿಸಿದ್ದರು. ಕ.ಸಾ.ಪ ಖಜಾಂಚಿ ವಾಯ್.ಟಿ.ಪಾಟೀಲ ಸ್ವಾಗತಿಸಿ ವಂದಿಸಿದರು.

# ಜು. 11 ರಿಂದ 21 ರವರೆಗೆ ತಾಳಿಕೋಟೆಯ ಶ್ರೀ ಖಾಸ್ಗತೇಶ್ವರ ಜಾತ್ರಾ ಮಹೋತ್ಸವ

**ತಾಳಿಕೋಟೆ :** ಸ್ಥಳೀಯ ಶ್ರೀ ಖಾಸ್ಗತೇಶ್ವರ ಮಹಾ ಶಿವಯೋಗಿಗಳ ಜಾತ್ರಾ ಮಹೋತ್ಸವವು ಪ್ರತೀ ವರ್ಷದಂತೆ ಈ ಸಲ ಜೂಲೈ 11 ರಿಂದ 21 ರವಿವಾರದವರೆಗೆ ವಿಜೃಂಭಣೆಯಿಂದ ಜರುಗಲಿದೆ.

ಶ್ರೀ ಖಾಸ್ಗತೇಶ್ವರ ಮಠದ ಬಾಲಶಿವಯೋಗಿ ಶ್ರೀ ಸಿದ್ದಲಿಂಗ ಮಹಾ ಸ್ವಾಮಿಗಳವರ ಘನ ಅಧ್ಯಕ್ಷತೆಯಲ್ಲಿ ಜರುಗಲಿರುವ ಈ ಜಾತ್ರಾ ಮಹೋತ್ಸವದಲ್ಲಿ ಪ್ರತೀ ದಿನ ಬೆಳಿಗ್ಗೆ 6 ಘಂಟೆ-ಗೆ ಶ್ರೀ ಖಾಸ್ಗತೇಶ್ವರ ಕತೃ ಗದ್ದುಗೆಗೆ ಮಹಾರುದ್ರಾಭಿಷೇಕ, ಬಿಲ್ವಾರ್ಚನೆ, ಪುಷ್ಪಾರ್ಚನೆ, ಮಹಾ ಮಂಗಳಾರತಿ ಕಾರ್ಯಕ್ರಮವನ್ನು ವೇ॥ ವಿಶ್ವನಾಥ ವಿರಕ್ತಮಠ ಅವರು ನೆರವೇರಿಸುವರು.

ಒಂಬತ್ತು ದಿನಗಳ ಕಾಲ ಜರುಗಲಿರುವ ಶ್ರೀ ನಿಜಗುಣ ಶಿವಯೋಗಿಗಳ ಶಾಸ್ತ್ರ ಪ್ರವಚನವು ಬೆಳಿಗ್ಗೆ 8-30 ರಿಂದ 9-30 ರವರೆಗೆ ಸಾಯಂಕಾಲ 6 ರಿಂದ 7 ಘಂಟೆಯವರೆಗೆ ಜರುಗುವದು. ಶಾಸ್ತ್ರ ಪ್ರವಚನವನ್ನು ಕೋರವಾರ ಚೌಕಿಮಠದ ಶ್ರೀ ಮುರುಘೇಂದ್ರ ಮಹಾಸ್ವಾಮಿಗಳು, ಗಡಿ ಸೋಮನಾಳದ ಇಂದುಧರ ಮಹಾಸ್ವಾಮಿಗಳು, ಶಿವಶರಣೆಯರಾದ ಶಾಂತಮ್ಮ ಕೋಳೂರ, ದಾನಮ್ಮ ಮಠ, ಇಂದುಮತಿ ಬಬಲೇಶ್ವರ, ಹಾಗೂ ಎಸ್. ಎಸ್.ಬೇನಾಳಮಠ(ಬೇಕಿನಾಳ), ಆನಂದಾಶ್ರಮ ಶಾಸ್ತ್ರ ಸಮಿತಿ ಬಳಗದವರು ನಡೆಸಿಕೊಡುವರು.

ಜೂಲೈ 11 ಗುರುವಾರರಂದು ಪ್ರಾರಂಭಗೊಳ್ಳಲಿರುವ ಸಪ್ತ ಭಜನಾ ಕಾರ್ಯಕ್ರಮವು ಜೂಲೈ 18 ಗುರುವಾರರಂದು ಮಂಗಲಗೊಳ್ಳುವದು. ಈ ಭಜನಾ ಕಾರ್ಯಕ್ರಮದಲ್ಲಿ ತಾಳಿಕೋಟೆ, ಗೊಟಗುಣಕಿ, ಮೈಲೇಶ್ವರ, ಬಿಳೇಭಾವಿ, ಹಗರಟಗಿ, ಬ.ಸಾಲವಾಡಗಿ, ಕೋ.ಬೂದಿಹಾಳ, ವಂದಗನೂರ, ಬೋಳವಾಡ, ಬೊಮ್ಮನಹಳ್ಳಿ, ಕಾ.ಬೂದಿಹಾಳ, ಅಸ್ಕಿ, ಬನ್ನೆಟ್ಟಿ, ಹೊಸಳ್ಳಿ, ಗುಂಡಲಗೇರಿ, ತುಂಬಗಿ, ಪತ್ತೇಪೂರ, ಗಡಿಸೋಮನಾಳ, ಕ್ಯಾತನಾಳ, ಹೂವಿನಹಳ್ಳಿ, ಮಿಣಜಗಿ, ಮೂಕಿಹಾಳ, ಕಲ್ಲದೇವನಹಳ್ಳಿ, ಹಡಗಿನಾಳ, ಹರನಾಳ, ಗುತ್ತಿಹಾಳ, ಶಿವಪೂರ, ಬಾವೂರ, ಬಳವಾಟ, ಲಿಂಗದಳ್ಳಿ, ಬೇನಾಳ, ಇಂಗಳಗೇರಿ, ತಾರನಾಳ, ಪಡೇಕನೂರ, ಬ್ಯಾಕೋಡ, ಸಾಲವಾಡಗಿ, ಜಮ್ಮಲದಿನ್ನಿ, ಕೂಚಬಾಳ, ಬಳಗಾನೂರ, ಕೊಡಗಾನೂರ, ಬ್ಯಾಲ್ಯಾಳ, ತಮದಡ್ಡಿ, ಚಿಕ್ಕನಹಳ್ಳಿ, ಆಲ್ಯಾಳ, ಕೊಣ್ಣೂರ, ಶರಣಸೋಮನಾಳ, ಸಿಂದಗೇರಿ, ಚೊಕಾವಿ, ನೀರಲಗಿ, ನಾವದಗಿ, ಗುಂಡಕನಾಳ, ತಳ್ಳಳ್ಳಿ, ಜಲಪೂರ, ಶಳ್ಳಗಿ, ಮಡಿಕೇಶ್ವರ, ಲಕ್ಕುಂಡಿ, ವಸಂತಾಪೂರ, ವಡವಡಗಿ, ಬಿಂಜಲಬಾವಿ, ಪೀರಾಪೂರ, ಹೂವಿನಹಳ್ಳಿ, ಭಂಟನೂರ, ಅಮಲ್ಯಾಳ, ಚಿಂಚೋಳಿ, ಕಾರಗನೂರ, ನಾಗರಾಳಹುಲಿ, ಎಂ.ಬೊಮ್ಮನಹಳ್ಳಿ, ಬಂಗಾರಗುಂಡ ಮೊದಲಾದ ಗ್ರಾಮಗಳನ್ನೊಳಗೊಂಡು ಸುಮಾರು 150 ಕ್ಕೂ ಮೇಲ್ಪಟ್ಟು ಭಜನಾ ಮಂಡಳಿಯವರು ಪಾಲ್ಗೊಂಡು ಶಿವ ಭಜನೆ ಸೇವೆ ಸಲ್ಲಿಸುವರು.

ದಿ. 17 ಬುಧವಾರರಂದು ಸಾಯಂಕಾಲ 5 ಘಂಟೆಯಿಂದ ಶ್ರೀ ಖಾಸ್ಗತೇಶ್ವರ ಮಹಾ ಶಿವಯೋಗಿಗಳವರ ಧ್ವಜದ ಮೆರವಣಿಗೆಯು ಶ್ರೀ ಬಸವೇಶ್ವರ ದೇವಸ್ಥಾನದಿಂದ ಪ್ರಾರಂಭಗೊಂಡು ಸಕಲ ವಾದ್ಯ ವೈಭವಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಹಾಯ್ದು ಶ್ರೀ ಮಠಕ್ಕೆ ತಲುಪಿ ಅಲ್ಲಿ ಧ್ವಜದ ಪ್ರತಿಷ್ಠಾಪನಾ ಕಾರ್ಯಕ್ರಮ ನೆರವೇರುವುದು.

ದಿ. 18 ಗುರುವಾರರಂದು ಬೆಳಿಗ್ಗೆ 4 ಘಂಟೆಗೆ ಪ್ರಾರಂಭಗೊಳ್ಳಲಿರುವ ಪ್ರಭಾತಪೇರಿಯೊಂದಿಗೆ ಮೊಸರು ಗಡಿಗೆ(ಗೋಪಾಲ ಕಾವಲಿ) ಒಡೆಯುವ ಕಾರ್ಯಕ್ರಮವು ನಸುಕಿನ ಜಾವ 5-30 ಘಂಟೆಗೆ ಜರುಗುವುದು. ಅಂದೇ ಸಪ್ತ ಭಜನಾ ಕಾರ್ಯಕ್ರಮ ಮಂಗಲಗೊಳ್ಳುವುದಲ್ಲದೇ ಮದ್ಯಾಹ್ನ 12 ಘಂಟೆಗೆ ಮಹಾಪ್ರಸಾದ ವಿತರಣೆ ನಡೆಯುವುದು. ರಾತ್ರಿ ಶ್ರೀ ಮಠದಲ್ಲಿ ಸಂಗೀತ ಕಾರ್ಯಕ್ರಮ ಜರುಗುವದು.

ದಿ. 19 ಶುಕ್ರವಾರರಂದು ಮುಂಜಾನೆ 8 ಘಂಟೆಯಿಂದ ಶ್ರೀ ಖಾಸ್ಗತ ಶ್ರೀಗಳ ಬೆಳ್ಳಿ ಮೂರ್ತಿ ಆನೆ ಅಂಭಾರಿ ಮೇಲೆ ಕೂಡ್ರಿಸಿಕೊಂಡು ಆಶ್ವಾರೂಢ ರಥದಲ್ಲಿ ಶ್ರೀ ಸಿದ್ದಲಿಂಗ ಮಹಾ ಸ್ವಾಮಿಗಳನ್ನು ಕೂಡ್ರಿಸಿ ಶ್ರೀ ಮಠದಿಂದ ವಿವಿಧ ವಾದ್ಯ ವೈಭವಗಳೊಂದಿಗೆ ಭವ್ಯ ಮೆರವಣಿಗೆಯು ರಾಜವಾಡೆಯ ಭೀಮನಭಾವಿಯಲ್ಲಿ ಗಂಗಸ್ಥಳಕ್ಕೆ ತೆರಳಿ ಗಂಗಸ್ಥಳ ಮುಗಿಸಿಕೊಂಡು ಪ್ರಮುಖ ಬೀದಿಗಳಲ್ಲಿ ಆನೆ ಅಂಭಾರಿ ಉತ್ಸವದೊಂದಿಗೆ ಶ್ರೀಗಳ ಮಠಕ್ಕೆ ತಲುಪುವದು.

ಅಂದೇ ಸಾಯಂಕಾಲ 5 ಘಂಟೆಗೆ ಶ್ರೀ ಖಾಸ್ಗತ ಮಹಾಶಿವಯೋಗಿಗಳವರ ಮಹಾರಥೋತ್ಸವ ಅಸಂಖ್ಯಾತ ಭಕ್ತ ಸಮೂಹದ ಮದ್ಯ ಜರುಗುವದು. ನಂತರ ಶ್ರೀ ಮಠದ ಸಿದ್ದಲಿಂಗ ಮಹಾಸ್ವಾಮಿಗಳಿಂದ ಆಶೀರ್ವಚನ, ಆಶೀರ್ವಾದ ದಯಪಾಲಿಸುವರು.

ಜೂಲೈ21ರವಿವಾರರಂದು ಹುಣ್ಣಿಮೆಯ ದಿನ ಸಾಯಂಕಾಲ 5 ಘಂಟೆಗೆ ಶ್ರೀ ಖಾಸ್ಗತ ಶಿವಯೋಗಿಗಳವರ ರಥದ ಕಳಸ ಇಳಿಸುವ ಕಾರ್ಯಕ್ರಮದೊಂದಿಗೆ ಜಾತ್ರಾ ಮಹೋತ್ಸವವು ಮಂಗಲಗೊಳ್ಳಲಿದೆ. ಕಾರಣ ಪಟ್ಟಣ ಹಾಗೂ ನಗರ, ಸುತ್ತಮುತ್ತಲಿನ ಗ್ರಾಮಗಳ ಜನತೆ ಜಾತ್ರೋತ್ಸವದಲ್ಲಿ ಪಾಲ್ಗೊಂಡು ಶ್ರೀ ಖಾಸ್ಗತೇಶ್ವರ ಮಹಾ ಸ್ವಾಮಿಗಳ ಕೃಪೆಗೆ ಪಾತ್ರರಾಗಬೇಕೆಂದು ಶ್ರೀಮಠದ ಉಸ್ತುವಾರಿ ವೇ॥ ಮುರುಘೇಶ ವಿರಕ್ತಮಠ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# ಕೃಷ್ಣಾ ನದಿಯಲ್ಲಿ ಬೋಟ್ ಸೇವೆ ಆರಂಭ



**ರಬಕವಿ :** ಮಹಾರಾಷ್ಟ್ರದ ವಿವಿಧ ಜಲಾಶಯಗಳಿಂದ ಕೃಷ್ಣಾ ನದಿಗೆ ಸಾಕಷ್ಟು ಪ್ರಮಾಣದಲ್ಲಿ ನೀರಿನ ಒಳ ಹರಿವು ಹೆಚ್ಚಿಗೆಯಾಗಿದೆ. ಇದರಿಂದಾಗಿ ಸಮೀಪದ ಅಥಣಿ ತಾಲ್ಲೂಕಿನ ಮಹಿಷವಾಡಗಿ ಸೇತುವೆ ನೀರಿನಲ್ಲಿ ಮುಳುಗಿರುವುದರಿಂದ ನದಿಯಲ್ಲಿ ಈಗ ಬೋಟ್ ಸೇವೆ ಆರಂಭಗೊಂಡಿದೆ.

ರಬಕವಿ ಬನಹಟ್ಟಿ ತಾಲ್ಲೂಕಿನ ವಿವಿಧ ನಗರ ಮತ್ತು ಗ್ರಾಮೀಣ ಪ್ರದೇಶಗಳಿಂದ ಅಥಣಿ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಿಗೆ ತೆರಳಲು ಇದು ಬಹಳಷ್ಟು ಅನುಕೂಲವಾಗಿದೆ. ದಿನನಿತ್ಯ ಎರಡೂ ತಾಲ್ಲೂಕುಗಳ ಸಾವಿರಾರು ಜನರು ಬೋಟ್ ಮೂಲಕ ಪ್ರಯಾಣ ಮಾಡುತ್ತಿದ್ದಾರೆ.

ಅಸುರಕ್ಷತೆಯ ಪ್ರಯಾಣ: ನದಿಯ ಮೂಲಕ ಪ್ರಯಾಣ ಮಾಡುವವರಿಗೆ ಯಾವುದೆ ಸುರಕ್ಷತೆ ಇಲ್ಲದಂತಾಗಿದೆ. ಇಲ್ಲಿಯ ಪ್ರಯಾಣಿಕರಿಗೆ ಜೀವ ರಕ್ಷಕ ಕವಚಗಳ ಸೌಲಭ್ಯ ಕೂಡಾ ಇಲ್ಲದಂತಾಗಿದೆ. ಆದ್ದರಿಂದ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಇತ್ತ ಗಮನ ನೀಡಿ ಜೀವ ರಕ್ಷಕ ಕವಚಗಳನ್ನು ವಿತರಣೆ ಮಾಡುವಂತೆ ಕ್ರಮ ತೆಗೆದುಕೊಳ್ಳಬೇಕಾಗಿದೆ.

# ಶಿವಬೋಧರಂಗ ಕಾಲೇಜಿನಲ್ಲಿ ಮಾದಕ ವಸ್ತು ನಿಷೇದ ದಿನಾಚರಣೆ




**ಮೂಡಲಗಿ :** ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳಾದ ಡ್ರಗ್ಸ್ ತರಹದ ಟ್ಯಾಬ್ಲೆಟ್ಸ್, ಡ್ರಗ್ಸ್ ಪೌಡರ್, ತಂಬಾಕು, ಗುಟಕಾ, ಮತ್ತು ಗಾಂಜಾದಂತಹ ಮಾದಕ ವಸ್ತುಗಳನ್ನು ಬಳಸಬಾರದು ಇವುಗಳನ್ನು ಒಮ್ಮೆ ಬಳಿಸಿದರೆ ಜೀವನ ಪರಿಯಂತ ಬಿಡಲು ಸಾಧ್ಯವಾಗುವುದಿಲ್ಲ ಎಂದು ಪೋಲಿಸ್ ಠಾಣೆಯ ಪಿ.ಎಸ್.ಐ. ಎಚ್.ಎಲ್.ಧರ್ಮಟ್ಟಿ ಹೇಳಿದರು

ಪಟ್ಟಣದ ಮೂಡಲಗಿ ಶಿಕ್ಷಣ ಸಂಸ್ಥೆಯ ಶ್ರೀ ಶಿವಬೋಧರಂಗ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಮಾದಕ ವಸ್ತು ವಿರೋದಿ ದಿನ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಆಗಮಿಸಿ ಮಾತನಾಡಿದರು,

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕಾಲೇಜಿನ ಪ್ರಾಚಾರ್ಯ ಎಮ್.ಎಸ್.ಪಾಟೀಲ ಅವರು ಭಾತರದೇಶ ಅಭಿವೃದ್ದಿ ಹೊಂದಬೇಕಾದರೆಯುವ ಪೀಳಿಗೆಯು ಮಾದಕ ವಸ್ತುಗಳಿಂದ ದೂರ ಇರಬೇಕು. ಡ್ರಗ್ಸ್‌ವನ್ನು ನಿರಂತರವಾಗಿ ತೆಗೆದುಕೊಳ್ಳುವುದರಿಂದ ಮಾನಸಿಕ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಮತ್ತು ಮಾನಸಿಕ ಸ್ವಾದೀನ ಕಳೆದುಕೊಳ್ಳುತ್ತಾನೆ ಎಂದು ವಿವರವಾಗಿ ತಿಳಿಸಿದರು. ಕಾರ್ಯಕ್ರಮವನ್ನು ಬಿ.ಜಿ.ಗಡಾದ ನಿರೂಪಿಸಿದವರು, ಆರ್.ಎಚ್.ಯಕ್ಕುಂಡಿ. ವಂದಿಸಿದವರು.

# ತೇರದಾಳ ದಾಸರಟ್ಟಿಯಲ್ಲಿ ವಿದ್ಯುತ್ ಅವಘಡ ಪ್ರಕರಣ

## ಲೈಮನ್ ಭುಜಬಲಿ ಕೋರಿಗೇರಿ ಅಮಾನತು । ಮೃತ ಕುಟುಂಬಗಳಿಗೆ ಪರಿಹಾರ ಚೆಕ್ ವಿತರಿಸಿದ ಸಚಿವ

**ತೇರದಾಳ :** ಜೂ. 25ರಂದು ಇಲ್ಲಿನ ದಾಸರಟ್ಟಿಯಲ್ಲಿ ವಿದ್ಯುತ್ ಮೇನ್ ತಂತಿ ಹರಿದು ಬಿದ್ದ ಪರಿಣಾಮ ಇಬ್ಬರು ಮೃತ ಸ್ಥಳದಲ್ಲಿಯೇ ಮೃತಪಟ್ಟಿದ್ದ ಕುಟುಂಬಗಳಿಗೆ ಹೆಸ್ಕಾಂ ವತಿಯಿಂದ ಶುಕ್ರವಾರ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ತಲಾ ಐದು ಲಕ್ಷ ಪರಿಹಾರ ವಿತರಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ತಿಮ್ಮಾಪುರ, ನಿಜಕ್ಕೂ ಇದೊಂದು ಆಘಾತಕಾರಿ ಸಂಗತಿ. ಇದನ್ನು ಅರಗಿಸಿಕೊಳ್ಳುವುದು ಕಷ್ಟಸಾಧ್ಯ. ಘಟನೆ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ಬಂದಿದ್ದು, ಅವರು ಕೂಡ ತೀವ್ರ ನೋವು ವ್ಯಕ್ತಪಡಿಸಿದ್ದು, ತಕ್ಷಣವೇ ಮೃತ ಕುಟುಂಬಗಳಿಗೆ ಪರಿಹಾರ ಒದಗಿಸುವ ಕೆಲಸ ಮಾಡಿ ಎಂದು ಸೂಚನೆ ನೀಡಿದರು ಎಂದು ಸಚಿವ ತಿಮ್ಮಾಪುರ ತಿಳಿಸಿದರು. ಗಾಯಾಳುಗಳು ಸಂಪೂರ್ಣ ಗುಣಮುಖ ಆಗುವವರೆಗೆ ಸರಕಾರವೇ ಆಸ್ಪತ್ರೆಯ ವೆಚ್ಚ ಭರಿಸಲಿದೆ. ನಿಮ್ಮೊಂದಿಗೆ ನಮ್ಮ ಸರಕಾರ ಇದೆ ಎಂದು ಭರವಸೆ ನೀಡಿದ ಅವರು, ಘಟನೆ ನಡೆಯಲು ಕಾರಣರಾದ ಹೆಸ್ಕಾಂ ಅಧಿಕಾರಿಗಳನ್ನು ಅಮಾನತು ಗೊಳಿಸಲಾಗುವುದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವಾರ್ಡ್ ಸದಸ್ಯ ಶೆಟ್ಟೆಪ್ಪ ಸುಣಗಾರ, ಕೂಲಿ ಮಾಡಿ ಕುಟುಂಬವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದ ಯುವಕನ ಸಾವು ಆ ಕುಟುಂಬವನ್ನು ಬೀದಿಗೆ ತಂದಂತಾಗಿದೆ. ಆದ್ದರಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಯಡಿ ಹೆಚ್ಚಿನ ಪರಿಹಾರ ಒದಗಿಸುವ ಮೂಲಕ ನಿರ್ಗತಿಕ ಕುಟುಂಬಕ್ಕೆ ನೆರವು ಆಗಬೇಕೆಂದು ಸಚಿವರಲ್ಲಿ ಮನವಿ ಮಾಡಿದರು.

ಅಳುತ್ತಲೆ ಚೆಕ್ ಸ್ವೀಕಾರ–ಘಟನೆಯಲ್ಲಿ ಮೃತರಾದ ಸಂತೋಷ ಸುಣಗಾರ ಹಾಗೂ ಶೋಭಾ ಹುಲೆನ್ನವರ ಅವರ ಕುಟುಂಬಸ್ಥರು ಅಳುತ್ತಲೆ ಸಚಿವರಿಂದ ಚೆಕ್ ಪಡೆದುಕೊಂಡರು. ಇಂದು ಮೃತ ಸಂತೋಷನ ಮದುವೆ ನಿಗದಿಯಾಗಿತ್ತು. ಆದರೆಮದುವೆದಿನಆತನಸಾವಿನಪರಿಹಾರ ಬಂದಿದ್ದು ಕಂಡು ದಾಸರಟ್ಟಿಯಲ್ಲಿನ ಜನರಲ್ಲಿ ಕಣ್ಣೀರು ಹಾಕಿದರು. ತಹಸೀಲ್ದಾರ್ ಗಿರೀಶ ಸ್ವಾದಿ, ವಿಜಯಕುಮಾರ ಕಡಕೋಳ, ಹೆಸ್ಕಾಂ ಅಧೀಕ್ಷಕ ಅಭಿಯಂತರ ಸುನೀಲ ಯಳಸಂಗಿಮಠ, ಇಇ ಸಂತೋಷ ಪಾಟೀಲ, ಜಮಖಂಡಿ ಕಾರ್ಯನಿರ್ವಾಹಕ ಅಭಿಯಂತರ ಸುರೇಶ ಮುರಗೋಡ, ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ಲಕ್ಷ್ಮಣ ದೇಸಾರಟ್ಟಿ, ಮಲ್ಲಪ್ಪ ಸಿಂಗಾಡಿ, ಪ್ರವೀಣ ನಾಡಗೌಡ, ಡಾ. ಪದ್ಮಜೀತ ನಾಡಗೌಡ, ಡಾ. ಎ.ಆರ್ ಬೆಳಗಲಿ, ಹನಮಂತ ರೋಡನ್ನವರ, ಗೌತಮ ರೋಡಕರ,ಪಜಲ್ ಅತಾರಾವುತ್, ಧನಪಾಲ ಬೋದೆನ್ನವರ ಇದ್ದರು.

ಅಮಾನತು–ದಾಸರಟ್ಟಿಯಲ್ಲಿ ನಡೆದ ವಿದ್ಯುತ್ ಅವಘಡ ಪ್ರಕರಣಕ್ಕೆ ಸಂಬಂಧಿಸಿದಂತೆ ಲೈಮನ್ ಭುಜಬಲಿ ಕೋರಿಗೇರಿ ಅವರನ್ನು ಹೆಸ್ಕಾಂ ಶಿಸ್ತು ಪ್ರಾಧಿಕಾರ ಜಿಲ್ಲಾಧ್ಯಕ್ಷ ಸಿದ್ದಪ್ಪ ಬಿಂಜಿಗೇರಿ ಅಮಾನತುಗೊಳಿಸಿ ಜೂ.26ರಂದು ಆದೇಶ ಹೊರಡಿಸಿದ್ದಾರೆ. ಘಟನೆ ನಡೆದ ಜೂ. 25ರಂದು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ತಿಮ್ಮಾಪುರ ಘಟನಾ ಸ್ಥಳಕ್ಕೆ ಬೇಟಿ ನೀಡಿದ ಸಂದರ್ಭದಲ್ಲಿ ದಾಸರಟ್ಟಿ ಜನರಿಗೆ ಭರವಸೆ ನೀಡಿದ್ದರು. ಮತ್ತು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಭುಜಬಲಿ ಕೋರಿಗೇರಿ ಹಾಗೂ ಹೆಸ್ಕಾಂ ಅಧಿಕಾರಿ ಸಿಬ್ಬಂದಿಗಳ ಮೇಲೆ ಪ್ರಕರಣ ದಾಖಲಾಗಿತ್ತು.

# ಶೀಥಲಗೊಂಡಿರುವ ಶಾಲಾ ಕಟ್ಟಡ, ಭಯದಲ್ಲಿ ವಿದ್ಯಾರ್ಥಿಗಳು ಸಚಿವರಿಗೆ ಮನವಿ, ದುರಸ್ತಿಯ ಭರವಸೆ

**ತೇರದಾಳ :** ವಿದ್ಯುತ್ ಅವಘಡದಿಂದ ದಿಕ್ಕೆಟ್ಟಿರುವ ಇಲ್ಲಿನ ದಾಸರಟ್ಟಿ ಜನ ಆ ಆಘಾತದಿಂದ ಇನ್ನೂ ಹೊರ ಬಂದಿಲ್ಲ. ಈಗ ಅಲ್ಲಿನ ಸರಕಾರಿ ಶಾಲೆಯ ದು:ಸ್ಥಿತಿಗೆ ಆತಂಕಗೊಂಡಿದ್ದಾರೆ.



ಶಾಲೆಯ ಕಟ್ಟಡ ಸಂಪೂರ್ಣ ಶೀತಲಗೊಂಡಿದ್ದು, ಸ್ವಲ್ಪ ಮಳೆ ಆದರೆ ಆಕು ಸೋರುತ್ತದೆ. ಮೇಲ್ಛಾವಣಿಯ ಸಿಮೆಂಟ್ ಮೇಲಿಂದ ಮೇಲೆ ಕತ್ತರಿ ಬೀಳುತ್ತಿದೆ. ಇದರಿಂದ ತೀವ್ರ ಆತಂಕದಲ್ಲಿರುವ ಮಕ್ಕಳು ಹಾಗೂ ಪಾಲಕರು ಶಾಲೆಗೆ ಹೋಗಲು ಹಿಂದೇಟು ಹಾಕುತ್ತಿದ್ದಾರೆ.

ನಮ್ಮ ಚೆನ್ನದಾಸರ ಸಮುದಾಯ ಬಹಳಷ್ಟು ಹಿಂದುಳಿದ ಮತ್ತು ಅನಕ್ಷರಸ್ಥ ಸಮುದಾಯವಾಗಿದೆ. ನಮ್ಮ ದಾಸರಟ್ಟಿಯಲ್ಲಿನ ಸರಕಾರಿ ಶಾಲೆ ಬಿಟ್ಟರೆ ನಮಗೆ ಬೇರೆ ಶಾಲೆಗೆ ನಮ್ಮ ಮಕ್ಕಳನ್ನು ಕಳುಹಿಸಲು ಸಾಧ್ಯ ಆಗುತ್ತಿಲ್ಲ.

ಆದರೆ ಇಲ್ಲಿನ ಶಾಲೆ ಕಟ್ಟಡ ಬಹಳಷ್ಟು ಹಾಳಾಗಿದ್ದರಿಂದ ಯಾವಾಗ ಕುಸಿದು ಬೀಳುತ್ತದೆ ಎಂಬುದು ಗೊತ್ತಿಲ್ಲ. ಇದರಿಂದ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂದೇಟು ಹಾಕುವಂತಾಗುತ್ತಿದೆ. ಆದ್ದರಿಂದ ದಾಸರಟ್ಟಿಯಲ್ಲಿನ ಶಾಲೆ ಕಟ್ಟಡವನ್ನು ದುರಸ್ತಿ ಮಾಡಿಸಬೇಕು.

ಇಲ್ಲವೇ ಹೊಸ ಕಟ್ಟಡ ನಿರ್ಮಿಸಿ ಕೊಡಬೇಕೆಂದು ವಾರ್ಡ್ ಸದಸ್ಯ ಶೆಟ್ಟೆಪ್ಪ ಸುಣಗಾರ, ಪುರಸಭೆ ಮಾಜಿ ಅಧ್ಯಕ್ಷ ಹನಮಂತ ರೋಡನ್ನವರ ಹಾಗೂ ಧನಪಾಲ ಬೋದೆನ್ನವರ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರಿಗೆ ಮನವಿ ಸಲ್ಲಿಸಿದರು.

ಸಚಿವರು ಕೂಡ ಮನವಿ ಸ್ಪಂಧಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

# ಅಧ್ಯಕ್ಷರಾಗಿ ಸವದಿ ಉಪಾಧ್ಯಕ್ಷರಾಗಿ ಭಜಂತ್ರಿ ಅವಿರೋಧ ಆಯ್ಕೆ



**ರಬಕವಿ ಬನಹಟ್ಟಿ :** ತಾಲೂಕಿನ ನಾವಲಗಿ ಗ್ರಾಮ ಪಂಚಾಯತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಎರಡನೇ ಅವಧಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಸದಾಶಿವ ಹ. ಸವದಿ ಹಾಗೂ ಉಪಾಧ್ಯಕ್ಷರಾಗಿ ಮುತ್ತವ್ವ ಭಜಂತ್ರಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇವರನ್ನು ಗ್ರಾಮ ಪಂಚಾಯತಿಯ ಸರ್ವ ಸದಸ್ಯರು, ಸಿಬ್ಬಂದಿ ವರ್ಗ ಹಾಗೂ ಗ್ರಾಮಸ್ಥರು ಅಭಿನಂದಿಸಿದ್ದಾರೆ.

# ಏಷ್ಯಾದಲ್ಲಿ ಅತಿ ಹೆಚ್ಚು ಚಂಚಲವಾಗಿದ್ದ ಭಾರತದ ರೂಪಾಯಿ ಈಗ ಅತ್ಯಂತ ಸ್ಥಿರ ಕರೆನ್ಸಿಯಾಗಿದೆ

ಒಂದು ದಶಕದ ಹಿಂದೆ, ಏಷ್ಯಾದ ಅತ್ಯಂತ ಚಂಚಲ ಕರೆನ್ಸಿಗಳಲ್ಲಿ ಒಂದಾಗಿದ್ದ ಭಾರತದ ರೂಪಾಯಿ, ಈಗ ಅತ್ಯಂತ ಸ್ಥಿರ ಕರೆನ್ಸಿಯಾಗಿದೆ. ಈ ಪರಿವರ್ತನೆಯು ಭಾರತದ ಬೆಳೆಯುತ್ತಿರುವ ಆರ್ಥಿಕ ಶಕ್ತಿ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನ ಪರಿಣಾಮಕಾರಿ ನಿರ್ವಹಣೆಗೆ ಸಾಕ್ಷಿಯಾಗಿದೆ.

ರೂಪಾಯಿಯ ಐತಿಹಾಸಿಕ ಚಂಚಲತೆ

2010 ರ ದಶಕದ ಆರಂಭದಲ್ಲಿ, ಭಾರತವು ಹೆಚ್ಚಿನ ಹಣದುಬ್ಬರವನ್ನು ಎದುರಿಸಿತು, ಅದು ಸುಮಾರು ಶೇಕಡಾ 10ಕ್ಕೆ ತಲುಪಿತ್ತು. ಜಾಗತಿಕ ಆರ್ಥಿಕ ಬಿಕ್ಕಟ್ಟಿನ ನಂತರ ಆರ್ಥಿಕ ಕುಸಿತವನ್ನು ಎದುರಿಸಲು ಸರ್ಕಾರದ ಭಾರೀ ವೆಚ್ಚವು ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸಿತು. ಅಲ್ಲದೇ, ಕಚ್ಚಾ ತೈಲ ಬೆಲೆಗಳು ಬ್ಯಾರೆಲ್ ಗೆ 100 ಡಾಲರ್ ಗಿಂತ ಹೆಚ್ಚಿದ್ದವು, ಇದು ತೈಲ ಆಮದುಗಳ ಮೇಲೆ ಹೆಚ್ಚು ಅವಲಂಬಿತವಾದ ಭಾರತದ ಆರ್ಥಿಕತೆಯನ್ನು ಕುಗ್ಗಿಸಿತು. ರಾಜಕೀಯ ಹಗರಣಗಳು ಮತ್ತು ಸಮರ್ಥ ನೀತಿ ಕೊರತೆಯು ಆರ್ಥಿಕ ಬೆಳವಣಿಗೆಯನ್ನು ಮತ್ತಷ್ಟು ಕುಂಠಿತಗೊಳಿಸಿದವು, ಭಾರತವು ಹೂಡಿಕೆದಾರರ ಆಕರ್ಷಣೆಯನ್ನು ಕಳೆದುಕೊಂಡಿತು. 2013 ರಲ್ಲಿ ಫೆಡರಲ್ ರಿಸರ್ವ್ ನ ಬಾಂಡ್ ಖರೀದಿಗಳನ್ನು ಕಡಿಮೆ ಮಾಡುವ ಯೋಜನೆಯು ಹೂಡಿಕೆದಾರರು ಭಾರತ ಸೇರಿದಂತೆ ಉದಯೋನ್ಮುಖ ಮಾರುಕಟ್ಟೆಗಳಿಂದ ಹಣವನ್ನು ಹೊರತೆಗೆಯಲು ಕಾರಣವಾಯಿತು. ಇದು ವಿದೇಶಿ ವಿನಿಮಯ ಮೀಸಲು ಕುಸಿತವಾಗಲು ಮತ್ತು ರೂಪಾಯಿ ದುರ್ಬಲವಾಗಲು ಕಾರಣವಾಯಿತು, ಭಾರತವನ್ನು "ದುರ್ಬಲ ಐದು" ಆರ್ಥಿಕತೆಗಳಲ್ಲಿ ಇರಿಸಿತು.

ರೂಪಾಯಿಯನ್ನು ಸ್ಥಿರಗೊಳಿಸಿದ ಅಂಶಗಳು

ಆರ್ಥಿಕ ಬೆಳವಣಿಗೆ ಮತ್ತು ರಾಜಕೀಯ ಸ್ಥಿರತೆ

2014 ರಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಧಿಕಾರ ವಹಿಸಿಕೊಂಡ ನಂತರ, ಭಾರತವು ಪ್ರಬಲವಾದ ಆರ್ಥಿಕ ಬೆಳವಣಿಗೆಯನ್ನು ಕಂಡಿದೆ. ಮೋದಿಯವರ ಸರ್ಕಾರ ಒದಗಿಸಿದ ರಾಜಕೀಯ ಸ್ಥಿರತೆ ವಿದೇಶಿ ಹೂಡಿಕೆದಾರರನ್ನು ಆಕರ್ಷಿಸಿದೆ. ಆರ್ ಬಿ ಐ ಗೆ ಹಣದುಬ್ಬರ–ಗುರಿ ನಿಗದಿ ಮತ್ತು ಬಜೆಟ್ ಕೊರತೆಯನ್ನು ಕಡಿಮೆ ಮಾಡುವುದು ಸೇರಿದಂತೆ ಇನ್ನಿತರ ನಿರಂತರ ಸುಧಾರಣೆಗಳು ಆರ್ಥಿಕತೆಯನ್ನು ಬಲಪಡಿಸಿವೆ.



ವಿದೇಶಿ ವಿನಿಮಯ ಮೀಸಲು

ಭಾರತವು ವಿದೇಶಿ ಕರೆನ್ಸಿಯ ವಿಶ್ವದ ಅತಿದೊಡ್ಡ ಮೀಸಲು ಹೊಂದಿದೆ. ಆರ್ ಬಿ ಐ ರೂಪಾಯಿ ಬಲವಾಗಿದ್ದಾಗ ಡಾಲರ್ ಗಳನ್ನು ಖರೀದಿಸಿ ದುರ್ಬಲವಾದಾಗ ಮಾರಾಟ ಮಾಡುತ್ತಿದೆ. ಈ ಕ್ರಮವು ರೂಪಾಯಿಯ ಮೌಲ್ಯದಲ್ಲಿ ದೊಡ್ಡ ಏರಿಳಿತಗಳನ್ನು ಸುಗಮಗೊಳಿಸುತ್ತದೆ, ಅದರ ಸ್ಥಿರತೆಗೆ ಕಾರಣವಾಗುತ್ತದೆ.

ರಚನಾತ್ಮಕ ಸುಧಾರಣೆಗಳು ಮತ್ತು ಜಾಗತಿಕ ಸಾಮರ್ಥ್ಯ ಕೇಂದ್ರಗಳು

ಜಾಗತಿಕ ಸಾಮರ್ಥ್ಯ ಕೇಂದ್ರಗಳ ಮೂಲಕ ಸಾಫ್ಟ್‌ವೇರ್ ಮತ್ತು ಲೆಕ್ಕಪತ್ರ ನಿರ್ವಹಣೆಯಂತಹ ಸೇವೆಗಳನ್ನು ರಫ್ತು ಮಾಡುವ ಕೇಂದ್ರವಾಗಿ ಭಾರತ ಮಾರ್ಪಟ್ಟಿದೆ. ಈ ಕೇಂದ್ರಗಳು ವಿದೇಶಿ ಹೂಡಿಕೆಯನ್ನು ತರುತ್ತವೆ ಮತ್ತು ಉದ್ಯೋಗಗಳನ್ನು ಸೃಷ್ಟಿಸುತ್ತವೆ, ಆರ್ಥಿಕತೆಯನ್ನು ಮತ್ತಷ್ಟು ಸ್ಥಿರಗೊಳಿಸುತ್ತವೆ. ವಿವಿಧ ಕ್ಷೇತ್ರಗಳಲ್ಲಿನ ಸುಧಾರಣೆಗಳು ವ್ಯವಹಾರದ ವಾತಾವರಣವನ್ನು ಸುಧಾರಿಸಿವೆ, ದೀರ್ಘಾವಧಿಯ ಹೂಡಿಕೆಗಳಿಗೆ ಭಾರತವನ್ನು ಹೆಚ್ಚು ಆಕರ್ಷಕ ತಾಣವನ್ನಾಗಿ ಮಾಡಿವೆ.

ಸ್ಥಿರ ರೂಪಾಯಿಯ ಪ್ರಯೋಜನಗಳು

ಹೂಡಿಕೆದಾರರಲ್ಲಿ ವಿಶ್ವಾಸ

ಕಡಿಮೆ ಚಂಚಲತೆಯ ರೂಪಾಯಿಯು ಹೂಡಿಕೆದಾರರನ್ನು ಹೆಚ್ಚು ಆಕರ್ಷಿಸುತ್ತದೆ, ಏಕೆಂದರೆ ಅವರು ಹೆಚ್ಚಿನ ಭವಿಷ್ಯದೊಂದಿಗೆ ಉತ್ತಮ ಕಾರ್ಯಕ್ಷಮತೆಯನ್ನು ನಿರೀಕ್ಷಿಸಬಹುದು. ಕೆಲವು ಲ್ಯಾಟಿನ್ ಅಮೇರಿಕಾ ಅಥವಾ ಆಫ್ರಿಕಾ ದೇಶಗಳ ಆರ್ಥಿಕತೆಗಳಲ್ಲಿನ ಕರೆನ್ಸಿಗಳಿಗಿಂತ ಭಿನ್ನವಾಗಿ, ರೂಪಾಯಿಯು ತುಲನಾತ್ಮಕವಾಗಿ ಸ್ಥಿರವಾದ ಆದಾಯವನ್ನು ನೀಡುತ್ತದೆ, ಹೂಡಿಕೆದಾರರಿಗೆ ಅಪಾಯವನ್ನು ಕಡಿಮೆ ಮಾಡುತ್ತದೆ.

ವ್ಯವಹಾರದ ಮೇಲೆ ಪರಿಣಾಮ

ರೂಪಾಯಿ ಮೌಲ್ಯದಲ್ಲಿನ ಸ್ಥಿರತೆ–ಯು ವ್ಯವಹಾರಗಳಿಗೆ ಹೆಚ್ಚು ಪರಿಣಾಮಕಾರಿಯಾಗಿ ವೆಚ್ಚಗಳನ್ನು ಯೋಜಿಸಲು ಮತ್ತು ನಿರ್ವಹಿಸಲು ಸಹಾಯ ಮಾಡುತ್ತದೆ. ಇದು ಕರೆನ್ಸಿ ಏರಿಳಿತಗಳಿಗೆ ಸಂಬಂಧಿಸಿದ ಅಪಾಯಗಳನ್ನು ಕಡಿಮೆ ಮಾಡುತ್ತದೆ, ಅಂತಾರಾಷ್ಟ್ರೀಯ ವ್ಯಾಪಾರ ಮತ್ತು ಹೂಡಿಕೆಯಲ್ಲಿ ತೊಡಗಿಸಿಕೊಳ್ಳಲು ಕಂಪನಿಗಳಿಗೆ ಸುಲಭವಾಗುತ್ತದೆ.

ಸವಾಲುಗಳು ಮತ್ತು ಭವಿಷ್ಯದ ದೃಷ್ಟಿಕೋನ

"ಹಾಟ್ ಮನಿ" ನಿರ್ವಹಣೆ

ಜೆಪಿ ಮೋರ್ಗನ್ & ಕಂಪನಿಯ ಪ್ರಮುಖ ಉದಯೋನ್ಮುಖ ಮಾರುಕಟ್ಟೆ ಸೂಚ್ಯಂಕದಲ್ಲಿ ಭಾರತೀಯ ಬಾಂಡ್ಗಳ ಸೇರ್ಪಡೆಯು ಹೆಚ್ಚಿನ ವಿದೇಶಿ ಹೂಡಿಕೆಯನ್ನು ತರುವ ನಿರೀಕ್ಷೆಯಿದೆ. ಆದಾಗ್ಯೂ, ಈ "ಹಾಟ್ ಮನಿ" ತ್ವರಿತವಾಗಿ ಮಾರುಕಟ್ಟೆಯನ್ನು ಪ್ರವೇಶಿಸಬಹುದು ಮತ್ತು ನಿರ್ಗಮಿಸಬಹುದು, ಇದು ಚಂಚಲತೆಯನ್ನು ಉಂಟುಮಾಡುತ್ತದೆ. ಸ್ಥಿರತೆಯನ್ನು ಕಾಪಾಡಿಕೊಳ್ಳಲು ಆರ್ ಬಿ ಐ ಇಂತಹ ಹರಿವುಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕಾಗುತ್ತದೆ.

ರೂಪಾಯಿಯ ಅಂತಾರಾಷ್ಟ್ರೀಯ ಬಳಕೆಗೆ ಉತ್ತೇಜನ

ಭಾರತವು ತನ್ನ ಕರೆನ್ಸಿಯ ಅಂತಾರಾಷ್ಟ್ರೀಯ ಬಳಕೆಯನ್ನು ಹೆಚ್ಚಿಸುವತ್ತ ಕೆಲಸ ಮಾಡುತ್ತಿದೆ, ವಿಶೇಷವಾಗಿ ವ್ಯಾಪಾರಕ್ಕಾಗಿ. ರೂಪಾಯಿಯ ಜಾಗತಿಕ ಅಸ್ತಿತ್ವವನ್ನು ಹೆಚ್ಚಿಸುವುದರಿಂದ ಅದರ ಮೌಲ್ಯವನ್ನು ಮತ್ತಷ್ಟು ಸ್ಥಿರಗೊಳಿಸಬಹುದು. ಹೆಚ್ಚುವರಿಯಾಗಿ, ಭವಿಷ್ಯದ ಒಳಹರಿವುಗಳನ್ನು ಉತ್ತಮವಾಗಿ ನಿರ್ವಹಿಸಲು ವಿದೇಶಿ ವಿನಿಮಯ ಮಾರುಕಟ್ಟೆಯ ಮಧ್ಯಸ್ಥಿಕೆಗಳಿಗಾಗಿ ಆರ್ ಬಿ ಐ ತನ್ನ ಕ್ರಮಗಳನ್ನು ನವೀಕರಿಸುತ್ತಿದೆ.

ಭಾರತೀಯ ರೂಪಾಯಿಯನ್ನು ಏಷ್ಯಾದ ಅತ್ಯಂತ ಅಸ್ಥಿರ ಕರೆನ್ಸಿಯಿಂದ ಅತ್ಯಂತ ಸ್ಥಿರ ಕರೆನ್ಸಿಯಾಗಿ ಪರಿವರ್ತಿಸಿರುವುದು ಗಮನಾರ್ಹ ಸಾಧನೆಯಾಗಿದೆ. ಇದು ಭಾರತದ ದೃಢವಾದ ಆರ್ಥಿಕ ಬೆಳವಣಿಗೆ, ಪರಿಣಾಮಕಾರಿ ನೀತಿ ಸುಧಾರಣೆಗಳು ಮತ್ತು ವಿದೇಶಿ ವಿನಿಮಯ ಮೀಸಲುಗಳ ಕಾರ್ಯತಂತ್ರದ ನಿರ್ವಹಣೆಯನ್ನು ಪ್ರತಿಬಿಂಬಿಸುತ್ತದೆ. ಇನ್ನೂ ಸವಾಲುಗಳಿದ್ದರೂ, ಕರೆನ್ಸಿ ನಿರ್ವಹಣೆಯನ್ನು ಬಲಪಡಿಸುವ ಮತ್ತು ಆರ್ಥಿಕ ಸ್ಥಿರತೆಯನ್ನು ಉತ್ತೇಜಿಸುವ ನಿರಂತರ ಪ್ರಯತ್ನಗಳು ಭವಿಷ್ಯದಲ್ಲಿ ರೂಪಾಯಿಯ ಸ್ಥಿರತೆಯನ್ನು ಉಳಿಸಿಕೊಳ್ಳುವ ಸಾಧ್ಯತೆಯಿದೆ. ಹೂಡಿಕೆಯನ್ನು ಆಕರ್ಷಿಸಲು, ವ್ಯವಹಾರಗಳನ್ನು ಬೆಂಬಲಿಸಲು ಮತ್ತು ಸ್ಥಿತಿಸ್ಥಾಪಕ ಆರ್ಥಿಕತೆಯನ್ನು ಉತ್ತೇಜಿಸಲು ಈ ಸ್ಥಿರತೆಯು ನಿರ್ಣಾಯಕವಾಗಿದೆ.

# ರೈತ ಗ್ರಾಹಕರ ಹಿತಕಾಯಲು ಬದ್ದರಾಗಿ ಸಿದ್ದು ಸವದಿ ಪಿಕೆಪಿಎಸ್ ಅಧ್ಯಕ್ಷ–ಉಪಾಧ್ಯಕ್ಷರ ಅವಿರೋಧ ಆಯ್ಕೆ

**ಚಿಮ್ಮಡ :** ರೈತರಿಗೆ ಸಹಕಾರಿ ಸಂಘದಿಂದ ದೊರೆಯುವ ಸಕಲ ಸೌಲಭ್ಯಗಳನ್ನು ನೀಡುವ ಮೂಲಕ ಅವರ ಹಿತ ಕಾಯಲು ನೂತನ ಅಧ್ಯಕ್ಷ ಉಪಾಧ್ಯಕ್ಷರು ಬದ್ದರಾಗಿರಬೇಕೆಂದು ತೇರದಾಳ ಶಾಸಕ ಸಿದ್ದು ಸವದಿ ಸಲಹೆ ನೀಡಿದರು.



ಗ್ರಾಮದಲ್ಲಿ ಮಂಗಳವಾರ ಸಂಜೆ ನಡೆದ ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಆಡಳಿತ ಮಂಡಳಿಯ ನೂತನ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ರೈತರ ಜೀವನಾಡಿಯಾಗಿರುವ ಈ ಸಂಘ ಈಗಾಗಲೇ ಲಾಭದಲ್ಲಿದ್ದು ರೈತ, ನೇಕಾರ, ಕೂಲಿ ಕಾರ್ಮಿಕರ ಹಾಗೂ ವ್ಯಾಪಾರಸ್ಥರ ಸರ್ವತೋಮುಖ ಅಭಿವೃದ್ದಿಗೆ ಶ್ರಮಿಸುವ ಮೂಲಕ ಸಂಘವನ್ನು ಇನ್ನೂ ಉನ್ನತ ಶ್ರೇಣಿಗೆ ಕೊಂಡೊಯ್ಯಬೇಕೆಂದರು.

ಗ್ರಾ.ಪಂ. ಮಾಜಿ ಅಧ್ಯಕ್ಷ ಪರಪ್ಪಾ ಪಾಲಭಾವಿ, ಪ್ರಭು ನೇಸೂರ ಮಾತನಾಡಿದರು.

ಇದೇ ಸಂಧರ್ಬದಲ್ಲಿ ನೂತನ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆಯಲ್ಲಿ ಅಧ್ಯಕ್ಷರಾಗಿ ಆಯ್ಕೆಗೊಂಡ ಹಣಮಂತ ಬಸಪ್ಪ ನೇಸೂರ ಉಪಾಧ್ಯಕ್ಷರಾಗಿ ಆಯ್ಕೆಯಾದ ಹಣಮಂತ ಮಲ್ಲಪ್ಪ ಕೋಳಿಯವರನ್ನು ಸತ್ಕರಿಸಲಾಯಿತು. ಹಿಂದಿನ ಅಧ್ಯಕ್ಷ ಶಂಕರ ಗಂಗಪ್ಪ ಬಟಕುರ್ಕಿ, ಗ್ರಾ.ಪಂ. ಮಾಜಿ ಅಧ್ಯಕ್ಷ ಗುರಲಿಂಗಪ್ಪಾ ಪೂಜೇರಿ, ಆನಂದ ಕವಟಿ, ಪ್ರಕಾಶ ಪಾಟೀಲ, ತಾ.ಪಂ. ಮಾಜಿ ಉಪಾಧ್ಯಕ್ಷ ಪ್ರಭು ಮುಧೋಳ, ನಿಂಗಪ್ಪ ಪೂಜಾರಿ, ಬಸವರಾಜ ಕುಂಚನೂರ, ಗುರುಪಾದಪ್ಪಾ ಉರಭಿನವರ ಸೇರಿದಂತೆ ಹಲವಾರು ಜನ ಪ್ರಮುಖರು, ಪಿಕೆಪಿಎಸ್ ನಿರ್ದೇಶಕರು ರೈತ ಪ್ರಮುಖರು ಕಾರ್ಯಕರ್ತರು ಉಪಸ್ಥಿತರಿದ್ದರು.

ಚುನಾವಣಾಧಿಕಾರಿಯಾಗಿ ಎಸ್. ಆರ್. ನ್ಯಾಮಗೌಡ ಆಗಮಿಸಿ ಚುನಾವಣಾ ಪ್ರಕ್ರಿಯೆ ಪೋರೈಸಿದರು. ಕಾರ್ಯಕ್ರಮಕ್ಕೆ ಸಂಘದ ಮುಖ್ಯ ಕಾರ್ಯ ನಿರ್ವಾಹಕ ಎಂ.ವ್ಹಿ. ವಜ್ಜರಮಟ್ಟಿ ಸ್ವಾಗತಿಸಿ ನಿರೂಪಿಸಿದರು, ಮಹಾಲಿಂಗ ಹಳ್ಳೂರ ವಂದಿಸಿದರು.

# ದೇಶದ ಜಿಡಿಪಿಯಲ್ಲಿ ಅಭಿಯಂತರರ ಪಾತ್ರ ಅಮೋಘ: ಶಿಂಧೆ

**ಜಮಖಂಡಿ :** ದೇಶದ ಒಟ್ಟು ಜೆಡಿಪಿಯಲ್ಲಿ ಶೇ. 24ರಷ್ಟು ಸಿವಿಲ್ ಇಂಜಿನೀಯರಿಂಗ್‌ದಿಂದ ಲಭಿಸುತ್ತಿದೆ. ದೇಶದ ಪ್ರತಿಯೊಂದು ಅಭಿವೃದ್ಧಿ ಕಾಮಗಾರಿಗಳಲ್ಲಿ ಸಿವಿಲ್ ಇಂಜಿನೀಯರಿಂಗ್ ಪಾತ್ರ ಅತ್ಯಂತ ಪ್ರಮುಖವಾಗಿದೆ ಎಂದು ಸ್ಥಳೀಯ ಅಸೋಸಿಯನ್ ಆಫ್ ಕನಸ್ಟಿಂಗ್ ಸಿವಿಲ್ ಇಂಜಿನೀಯರಿಂಗ್ ಸಂಸ್ಥೆಯ ಅಧ್ಯಕ್ಷ ಎ.ಆರ್.ಶಿಂಧೆ ಹೇಳಿದರು.



ನಗರದ ರಮಾನಿವಾಸ ಸಭಾಭವನದಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರಕಾರ ದಿ.10–6–2024 ರಂದು ಹೊಸದಾಗಿ ವೃತ್ತಿಪರ ಖಾಸಗಿ ಅಭಿಯಂತರರ ಕಾಯ್ದೆ ಜಾರಿಗೆ ತಂದಿದೆ. ಈಗಾಗಲೇ ಗುಜರಾತದಲ್ಲಿ ಕಾಯ್ದೆ ಚಾಲನೆಯಲ್ಲಿದೆ. ಈ ಕಾಯ್ದೆಯಿಂದ ವ್ಯಕ್ತಿ, ಸಮುದಾಯ ಮತ್ತು ದೇಶಧ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಇದರಿಂದ ನಿಗದಿತ ಅವಧಿಯಲ್ಲಿ ಗುಣಮಟ್ಟದ ಕಟ್ಟಡ ಸೇವೆಗಳು ಜನರಿಗೆ ತಲುಪಲಿವೆ ಎಂದರು.

ಕಾರ್ಯದರ್ಶಿ ಜಾಕೀರಹುಸೇನ ನದಾಫ ಮಾತನಾಡಿ, ಹೊಸದಾಗಿ ಆರಂಭಗೊಂಡಿರುವ ಸಂಘದಲ್ಲಿ 63 ಜನ ಅಭಿಯಂತರರು ಹೆಸರು ನೊಂದಾಯಿಸಿದ್ದಾರೆ. ಶೀಘ್ರದಲ್ಲಿ 18 ನಿರ್ದೇಶಕರನ್ನು ಒಳಗೊಂಡಿರುವ ರಾಜ್ಯಮಟ್ಟದ ಸಂಘಟನೆ ಜಮಖಂಡಿ ನಗರದಲ್ಲಿ ಉದ್ಘಾಟನೆಗೊಳ್ಳಲಿದೆ. ಕಟ್ಟಡ ಕಾರ್ಮಿಕರು, ಮಾಲಿಕರು ಮತ್ತು ಅಭಿಯಂತರರ ನಡುವೆ ಉತ್ತಮ ಬಾಂಧ್ಯವ್ಯ ಬೆಳೆಯಲಿದೆ ಎಂದರು.

ಅಭಿಯಂತರ ವಿಜಯ ಕಟಗಿ ಮಾತನಾಡಿ, ಓರ್ವ ವ್ಯಕ್ತಿ ಮನೆ ನಿರ್ಮಾಣ ಸಂದರ್ಭದಲ್ಲಿ ಬರತಕ್ಕ ತೊಂದರೆ ಗಳಿಗೆ ಪರಿಹಾರ ಲಭಿಸುವ ಮೂಲಕ ನಿಗದಿತ ಅವಧಿಯಲ್ಲಿ ಮನೆಗಳು, ವಾಣಿಜ್ಯ ಮಳಿಗೆಗಳು ನಿರ್ಮಾಣ ಗೊಂಡು ಬಳಕೆಯಾಗಲಿವೆ. ನಮ್ಮ ಸಂಘಟನೆ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಜನರ ಸೇವೆಯಲ್ಲಿ ತೊಡಗಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಉಪಾಧ್ಯಕ್ಷ ರಾಜು ಹಿರೇಮಠ, ಖಜಾಂಚಿ ಉದಯ ಮುನ್ನೊಳ್ಳಿ, ಪ್ರದೀಪ ನವಣಿ, ರಜತ ಮಹಾಬಳಶೆಟ್ಟಿ, ಸಂದೀಪ ಮಿಶೆನ್ನವರ, ಭಾರ್ಗವ ಕುಲಕರ್ಣಿ, ವಿನೋದ ಕಡೆ, ಕೃಷ್ಣಾ ಫಡಕಿ ಸಹಿತ ಹಲವರು ಇದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State